# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 09–10–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | **ಕೌನ್ಸಿಲ್ ಕಾರ್ಯದರ್ಶಿ,** |
| ತೇಜಸ್ವಿನಿ ಎನ್.ರಾಜು – ಸದಸ್ಯರು | **ಉಪ ಆಯುಕ್ತರು (ಭೂಸ್ವಾಧೀನ),** |
| ಮುನಿಸ್ವಾಮಿಗೌಡ – ಸದಸ್ಯರು | **ಜಂಟಿ ನಿರ್ದೇಶಕರು (ಸಾಂಖ್ಯಿಕ)** |
| ಆನಂದ್. ವಿ – ಸದಸ್ಯರು | **ಸಹಾಯಕ ಕಾನೂನು ಅಧಿಕಾರಿ** |
| ಕೆ. ಪೂರ್ಣಿಮ – ಸದಸ್ಯರು | **ಕಂದಾಯ ಅಧಿಕಾರಿ (ಬ್ಯಾಟರಾಯನಪುರ)** |
| ಗಂಗಾಂಬಿಕೆ – ಸದಸ್ಯರು | **ಸಹಾಯ ಕಂದಾಯ ಅಧಿಕಾರಿ (ಬಸವನಗುಡಿ), (ಗಾಂದಿನಗರ)** |
| ನೂರ್ ಜಹಾನ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |
| **ಗೈರು ಹಾಜರಿದ್ದ ಸದಸ್ಯರುಗಳು** | --- |
| ಸುರೇಶ್. ಹೆಚ್ – ಸದಸ್ಯರು | --- |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | --- |
| ಕ್ವೀನ್‌ಎಲಿಜ್ಞೆಬತ್ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *<u>01]. ವಿಷಯದ ಸಂಖ್ಯೆ :–ತೆಆಸ್ಥಾಸ/98/2012–13</u>*

ಅಪರ ಆಯುಕ್ತರು (ಆಡಳಿತ) ರವರ ಟಿಪ್ಪಣಿ ಸಂಖ್ಯೆ : ಜೆ.ಡಿ.ಎಸ್/ಪಿಆರ್/32/11–12, ದಿನಾಂಕ : 21.07.2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 37 ಜನನ/ಮರಣ ನೊಂದಣಿ ಕೇಂದ್ರಗಳು, 6 ರೆಫರಲ್ ಆಸ್ಪತ್ರೆಗಳು ಹಾಗೂ 5 ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ನೋಂದಾಯಿಸುವ ಘಟನೆಗಳಿಗೆ ಸಂಬಂಧಿಸಿದಂತೆ, ಹಾಗೂ ಬಿ–1 ಕೇಂದ್ರಗಳಲ್ಲಿ ಪ್ರಮಾಣ ಪತ್ರ ವಿತರಿಸಲು, ಅವಶ್ಯವಿರುವ ಜನನ/ಮರಣ ಪ್ರಮಾಣ ಪತ್ರಗಳ ನಮೂನೆಗಳು ಮತ್ತು ತತ್ಸಂಬಂಧ ಅವಶ್ಯವಿರುವ ಅರ್ಜಿ ನಮೂನೆ, ಹೆಸರು ಸೇರ್ಪಡೆ ಅರ್ಜಿ ಮುಂತಾದವುಗಳನ್ನು ಮುದ್ರಿಸುವ ಅವಶ್ಯಕತೆ ಇರುತ್ತದೆ. ಇ–ಟೆಂಡರ್ ಮೂಲಕ ಟೆಂಡರ್ ಕರೆದು ದರಗಳನ್ನು ನಿಗಧಿಪಡಿಸಿ ಮುದ್ರಿಸಲು ಮಾನ್ಯ ಆಯುಕ್ತರವರಿಂದ ಅನುಮೋದನೆ ಪಡೆಯಲಾಗಿದೆ ಹಾಗೂ ಅವಶ್ಯವಿರುವ ಟೆಂಡರ್ ಡಾಕ್ಯೂಮೆಂಟನ್ನು ಸಹ ಸಿದ್ದಪಡಿಸಲಾಗಿದೆ. ಈ ಕೆಳಗೆ ನಮೂದು ಮಾಡಿರುವ ಸಂಖ್ಯೆಗಳಲ್ಲಿ ನಮೂನೆಗಳನ್ನು ಮುದ್ರಿಸುವ ಅವಶ್ಯಕತೆ ಇರುತ್ತದೆ.

1. ಜನನ ಪ್ರಮಾಣ ಪತ್ರ ನಮೂನೆಗಳ 25 ಲಕ್ಷ ಪ್ರತಿಗಳು.
2. ಮರಣ ಪ್ರಮಾಣ ಪತ್ರ ನಮೂನೆಗಳ 15 ಲಕ್ಷ ಪ್ರತಿಗಳು.
3. ಜನನ ಪ್ರಮಾಣ ಪತ್ರ ಕೋರಿ ಸಲ್ಲಿಸಲು ಅರ್ಜಿ ನಮೂನೆಗಳು 15 ಲಕ್ಷ ಪ್ರತಿಗಳು.
4. ಮರಣ ಪ್ರಮಾಣ ಪತ್ರ ಕೋರಿ ಸಲ್ಲಿಸಲು ಅರ್ಜಿ ನಮೂನೆಗಳು 10 ಲಕ್ಷ ಪ್ರತಿಗಳು.
5. ಹೆಸರು ಸೇರ್ಪಡೆ ಕೋರಿ ಸಲ್ಲಿಸುವ ಅರ್ಜಿ ನಮೂನೆ 10 ಲಕ್ಷ ಪ್ರತಿಗಳು.

ಮೇಲೆ ನಮೂದು ಮಾಡಿರುವ ನಮೂನೆಗಳನ್ನು ಮುದ್ರಿಸುವ ವಿಚಾರದಲ್ಲಿ ಇ–ಟೆಂಡರ್ ಕರೆಯಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಅಪರ ಆಯುಕ್ತರು (ಆಡಳಿತ)ರವರ ದಿನಾಂಕ : 21.07.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಸಿರುವಂತೆ ನಮೂನೆಗಳನ್ನು ಒಂದೇ ಬಾರಿ ಮುದ್ರಿಸುವುದರಿಂದ ಪಾಲಿಕೆಗೆ ಆರ್ಥಿಕ ಹೊರೆಯಾಗುವುದನ್ನು ಪರಿಗಣಿಸಿ ಪ್ರತಿ ಮಾಸಕ್ಕೆ ಒಂದು ಬಾರಿ ಮಾತ್ರ ಅವಶ್ಯವಿರುವಷ್ಟು ನಮೂನೆಗಳನ್ನು ಮುದ್ರಿಸಿಕೊಳ್ಳುವ ಮಾರ್ಪಾಡಿನೊಂದಿಗೆ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## *02]. ವಿಷಯದ ಸಂಖ್ಯೆ :-ತೆಆಸ್ಥಾಸ/103/2012-13*

ಅಪರ ಆಯುಕ್ತರು (ಆಡಳಿತ) ರವರ ಟಿಪ್ಪಣಿ ಸಂಖ್ಯೆ : ಬಿ12(3)ಪಿಆರ್/186/00-01, ದಿನಾಂಕ: 23-06-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯಲ್ಲಿ ವಿವಿಧ ಇಲಾಖೆಯಲ್ಲಿ ಸಂಚಿತ ವೇತನದ ಮೇಲೆ 7 ಮಂದಿ ಅರೆಕಾಲಿಕ ನೌಕರರುಗಳು (1- ಪ್ರ.ದ.ಗು, 1- ದ್ವಿ.ದ.ಗು, 1- ಪ್ರಯೋಗ ಶಾಲಾ ಸಹಾಯಕರು, 4- ನಾ.ದ.ನೌ ನೌಕರರುಗಳು) ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಶ್ರೀ ಪ್ರಕಾಶ್, ಇವರನ್ನು ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಬಿ12(3)ಪಿಆರ್/281/95-96, ದಿನಾಂಕ : 13.10.1995 ಮತ್ತು 30-03-1996 ರಂತೆ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರನ್ನಾಗಿ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ ದಿ: 31-3-1996 ರವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವವರೆಗೆ ಮಾತ್ರ ಸಂಚಿತ ವೇತನದ ಮೇರೆಗೆ ರೂ. 2000/-ಗಳಂತೆ ಪಾಲಿಕೆಯ ಕಸ್ತೂರ ಬಾ ನಗರ ಪ್ರೌಢ ಶಾಲೆಯಲ್ಲಿ ಈ ಕೆಳಕಂಡ ಷರತ್ತು ಗೊಳಪಡಿಸಿ, ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಇವರ ನೇಮಕಾತಿ ದಿನಾಂಕ: 31-3-1996ರ ವರೆಗೆ ಮಾತ್ರ ಸೀಮಿತವಾಗಿದ್ದು, ನಂತರ ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ಪರಿಗಣಿಸಲಾಗಿದೆ.

ಸದರಿಯವರು ನೇಮಕಾತಿಯನ್ನು ಕ್ರಮಬದ್ದಗೊಳಿಸಲು ಒತ್ತಾಯಿಸಬಾರದು.

ಇವರ ಕೆಲಸ ನಿರ್ವಹಿಸಿದ ಅವಧಿಗೆ ಯಾವುದೇ ಸೌಲಭ್ಯಕ್ಕೆ ಅಥವಾ ಸೇವಾ ಜೇಷ್ಠತೆಗೆ ಅರ್ಹರಾಗಿರುವುದಿಲ್ಲ.

ಸೇವಾ ಅವಧಿ ಮುಗಿದ ನಂತರ ನ್ಯಾಯಾಲಯದ ಮೊರೆ ಹೋಗಬಾರದೆಂಬ ಷರತ್ತಿಗೆ ಒಳಪಟ್ಟಿದೆ.

ಈ ಕಛೇರಿಯ ದಿ:13-10-1995ರ ಜ್ಞಾಪನ ಪತ್ರದಂತೆ ಶ್ರೀಮತಿ.ಗೀತಾ ಹಾಗೂ ಟಿ.ರಮೇಶ್ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ 1995-96 ಸಾಲಿನ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವರೆಗೆ ಮಾತ್ರ ಅರೆಕಾಲಿಕ ದ್ವಿತೀಯ ದರ್ಜೆ ಗುಮಾಸ್ತರಾಗಿ ತಿಂಗಳಿಗೆ ರೂ.1,500 ಸಂಚಿತ ವೇತನದ ಮೇರೆಗೆ ಹಾಗೂ ಪ್ರಯೋಗ ಶಾಲಾ ಸಹಾಯಕರಾಗಿ ಸಂಚಿತ ವೇತನ ರೂ.1,400 ಮೇರೆಗೆ ಪ್ರೌಢಶಾಲಾ ವಿಜಯನಗರದಲ್ಲಿ ಕೆಲವು ಷರತ್ತುಗಳೊಂದಿಗೆ ನೇಮಕ ಮಾಡಲಾಗಿರುತ್ತದೆ.

ಮುಂದುವರೆದು ಶ್ರೀಮತಿ ಗೀತಾ ಹಾಗೂ ಶ್ರೀ ಟಿ. ರಮೇಶ್, ಇವರನ್ನು ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಬಿ12(3)ಪಿಆರ್/281/95-96, ದಿನಾಂಕ : 17.10.1995, 10.10.1995 ಮತ್ತು 23.03.1996 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ ದಿನಾಂಕ:31-03-1996ರವರೆಗೆ ತಾತ್ಕಾಲಿಕವಾಗಿ ನೇಮಕಮಾಡಿ ಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವ ವರೆಗೆ ಈ ಕೆಳಕಂಡ ನೌಕರರನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ.

ಶ್ರೀಮತಿ.ಆರ್.ಗೀತಾ. ದ್ವಿ.ದ.ಗು ರವರ ಸಂಚಿತ ವೇತನ ರೂ.1,500

ಶ್ರೀ.ಟಿ.ರಮೇಶ್ ಪ್ರಯೋಗ ಶಾಲಾ ಸಹಾಯಕರು ರವರ ಸಂಚಿತ ವೇತನ ರೂ.1,400

ಶ್ರೀ.ಎಸ್.ಬಿ.ಲಕ್ಷ್ಮೀನಾರಾಯಣ, ನಾ.ದ.ನೌ ರವರ ಸಂಚಿತ ವೇತನ ರೂ.1,300

ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಬಿ12(3)ಪಿಆರ್/281/95-96, ದಿನಾಂಕ : 10.10.1995 ಮತ್ತು 30.03.1996 ಈ ಕೆಳಕಂಡ ನೌಕರರನ್ನು ನಾಲ್ಕನೇ ದರ್ಜೆ ನೌಕರರಾಗಿ ದಿನಾಂಕ:31-03-1996 ರವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವರೆಗೆ ಮಾತ್ರ ಅರೆಕಾಲಿಕ ಜವಾನರಾಗಿ ತಿಂಗಳಿಗೆ ರೂ.1,300 ಸಂಚಿತ ವೇತನ ಮೇರೆಗೆ ಕೆಲವು ಷರತ್ತುಗಳೊಂದಿಗೆ ನೇಮಕ ಮಾಡಲಾಗಿರುತ್ತದೆ.

ಶ್ರೀಮತಿ ಮಹಾದೇವಮ್ಮ ನಾ.ದ.ನೌ

ಶ್ರೀ ಜಿ. ಗಂಗಪ್ಪ. ನಾ.ದ.ನೌ

ಶ್ರೀಮತಿ ಮಂಜುಳಾದೇವಿ, ನಾ.ದ.ನೌ.

ಶ್ರೀ.ಎಸ್.ಬಿ.ಲಕ್ಷ್ಮೀನಾರಾಯಣ, ನಾ.ದ.ನೌ.

ಅದೇ ರೀತಿ, ಆಯುಕ್ತರ ಕಛೇರಿಯ ದಿನಾಂಕ:30-03-1996ರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಬಿ12(3)ಪಿಆರ್/281/95-96 ರಂತೆ ದಿನಾಂಕ:31-03-1996ರವರೆಗೆ ತಾತ್ಕಾಲಿಕವಾಗಿ ನೇಮಕಮಾಡಿ ಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವ ವರೆಗೆ ಈ ಕೆಳಕಂಡ ನೌಕರರನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ.

ಶ್ರೀ ಪ್ರಕಾಶ ಪ್ರ.ದ.ಗು ರವರ ಸಂಚಿತ ವೇತನ ರೂ.2000

ಶ್ರೀಮತಿ ಮಹಾದೇವಮ್ಮ ನಾ.ದ.ನೌ ರವರ ಸಂಚಿತ ವೇತನ ರೂ.1300

ಶ್ರೀ ಜಿ. ಗಂಗಪ್ಪ. ನಾ.ದ.ನೌ ರವರ ಸಂಚಿತ ವೇತನ ರೂ.1300

ಶ್ರೀಮತಿ ಮಂಜುಳಾದೇವಿ, ನಾ.ದ.ನೌ. ರವರ ಸಂಚಿತ ವೇತನ ರೂ.1300

ಈ ಮಧ್ಯೆ ಶ್ರೀ ಪ್ರಕಾಶ್ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರು ಹಾಗೂ ಆರು ಮಂದಿ ಅರೆಕಾಲಿಕ ನೌಕರರು ಸೇವೆಯನ್ನು ಖಾಯಂ ಮಾಡಲು ಕೋರಿರುವ ಮನವಿ ದಿನಾಂಕ : 27–12–2005, ಮತ್ತು 16–01–2006 ರಂದು ಮನವಿ ಸಲ್ಲಿಸಿ ಕ್ರಮಬದ್ದಗೊಳಿಸಲು ಕೋರಿರುವ ಮೇರೆಗೆ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಲಾಗಿ ಸರ್ಕಾರವು ಪತ್ರದ ಸಂಖ್ಯೆ: ನಅಇ/506/ಎಂ.ಎನ್.ವೈ/2001, ದಿ: 23.05.2002ರ ರೀತ್ಯ, ಅರೆಕಾಲಿಕ ಸೇವೆಯನ್ನು ನಿಯಮಗಳ ಪ್ರಕಾರ ಸಕ್ರಮಗೊಳಿಸಲು ಬರುವುದಿಲ್ಲವೆಂದು ಆದೇಶಿಸಿರುವಂತೆ ಈ ಕಛೇರಿಯ ಹಿಂಬರಹದ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ : 13/28.02.2006 ರಂತೆ ಹಿಂಬರಹ ಜಾರಿ ಮಾಡಲಾಗಿರುತ್ತದೆ.

ಶ್ರೀ ಪ್ರಕಾಶ್, ಅರೆಕಾಲಿಕ ಪ್ರ.ದ.ಗು., ರವರು ಈ ಹಿಂಬರಹದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಪಿಟಿಷನ್ ಸಂಖ್ಯೆ: 9268/2006(ಎಸ್)ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಗೆ ಘನ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ : 9268/2006 (ಎಸ್) ರ ಆದೇಶ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 30–6–2008 ರಂದು, "The Petition stands disposed of directing the respondent to reconsider the claim of the petitioner for regularisation having regard to the ratio laid down by the Apex Court in Umadevi's case. The resultant effect, the impugned order at Annexure-K stands quashed." ಎಂದು ಆದೇಶ ಹೊರಡಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಈ ಪ್ರಕರಣವನ್ನು ಮರುಪರಿಶೀಲಿಸಲಾಗಿ, ಶ್ರೀ ಪ್ರಕಾಶ್, ಅರೆಕಾಲಿಕ ಪ್ರ.ದ.ಗು., ರವರಿಗೆ ದಿನಾಂಕ :17–02–2009 ರಂದು ನೋಟೀಸ್ ಜಾರಿ ಮಾಡಲಾಗಿದೆ. ಸದರಿಯವರು ದಿನಾಂಕ: 09–03–2009 ರಂದು ಸಲ್ಲಿಸಿರುವ ಉತ್ತರದಲ್ಲಿ, ತನ್ನ ಹಾಗೆಯೇ ಸಂಚಿತ ವೇತನದಲ್ಲಿ ನೇಮಿಸಿಕೊಂಡಂತಹ ಶ್ರೀ ಗೋವಿಂದರಾಜು ಮತ್ತು

ಶ್ರೀ ಸಿ.ರಮೇಶ್ ಅರೆಕಾಲಿಕ ಶಿಕ್ಷಕರನ್ನು ಖಾಯಂ ನೌಕರರೆಂದು ದಿ: 08–10–1998 ರಂದು ಆದೇಶ ಹೊರಡಿಸಿರುವಂತೆ, ತಮ್ಮನ್ನೂ ಸಹ, ಕ್ರಮಬದ್ದಗೊಳಿಸಲು ಕೋರಿದ್ದರು.

ಇದೇ ರೀತಿಯ ಪ್ರಕರಣದವೊಂದರಲ್ಲಿ, ಶ್ರೀ ಗೋವಿಂದರಾಜು (ಹಾಲಿ ಮರಣ) ಮತ್ತು ಶ್ರೀ ಸಿ.ರಮೇಶ್ ಅರೆಕಾಲಿಕ ಶಿಕ್ಷಕರುಗಳನ್ನು ಕ್ರಮಬದ್ಧಗೊಳಿಸುವ ಪ್ರಕರಣದಲ್ಲಿ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯಿಸಿರುವ ಶ್ರೀಮತಿ ಉಮಾದೇವಿ, ಪ್ರಕರಣವು **(Case reported in(2006) 4 SCC 1)**ದಿನಗೂಲಿ ನೌಕರರಿಗೆ ಮಾತ್ರ ಅನ್ವಯವಾಗಲಿದ್ದು, ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ನ್ಯಾಯಾಲಯವು ಅವಲೋಕಿಸಿರುವಂತೆ, ನಾಲ್ಕು ಷರತ್ತುಗಳನ್ನು ಪೂರೈಸಿದ ನೌಕರರನ್ನು ಒಂದು ಬಾರಿಯ ಕ್ರಮವಾಗಿ ಸಕ್ರಮಗೊಳಿಸಲು ಪರಿಗಣಿಸಬಹುದಾಗಿದೆ ಎಂಬುದಾಗಿ ನಿರ್ದೇಶನವಿರುವಂತೆ, ಸದರಿ ನಾಲ್ಕು ಷರತ್ತುಗಳನ್ನು ಮೇಲಿನ ಅರೆಕಾಲಿಕ ನೌಕರರು ಪೂರೈಸಿರುವರೆಂದು ಪರಿಗಣಿಸಿದಲ್ಲಿ, ಸದರಿಯವರುಗಳು ಅರೆಕಾಲಿಕ ಶಿಕ್ಷಕರುಗಳಾಗಿರುವುದರಿಂದ ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ದಿನಗೂಲಿ ನೌಕರರಿಗೆ ಅನ್ವಯವಾಗುವಂತೆ ನೀಡಿರುವ ಆದೇಶಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲವೆಂದು ಹಾಗೂ ಶ್ರೀ ಸಿ. ರಮೇಶ್ ಮತ್ತು ಶ್ರೀ ಗೋವಿಂದರಾಜು (ಹಾಲಿ ಮರಣ ಹೊಂದಿರುತ್ತಾರೆ) ಅರೆಕಾಲಿಕ ಸಹ ಶಿಕ್ಷಕರನ್ನು ಅರೆಕಾಲಿಕ ಸಹ ಶಿಕ್ಷಕರಾಗಿಯೇ ಮುಂದುವರೆಸಿ ದಿ: 15–07–2009ರಂದು ಆದೇಶ ಹೊರಡಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಕಾಶ್ ಬಿನ್ ಲಿಂಗಯ್ಯ ರವರು ಪೂರ್ಣಾವಧಿ ನೌಕರರಾಗಿರದೇ ಅರೆಕಾಲಿಕ ನೌಕರರಾಗಿದ್ದು ದಿನಾಂಕ: 01–01–1986ರ ನಂತರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವವರನ್ನು ಈ ಕಛೇರಿ ಆದೇಶ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ : 12.08.2009 ರಂತೆ ಸಕ್ರಮಗೊಳಿಸಲು ನಿಯಮಾವಳಿಯಲ್ಲಾಗಲಿ, ಸರ್ಕಾರದ ಆದೇಶಗಳಲ್ಲಾಗಲಿ ಅವಕಾಶವಿಲ್ಲದಿರುವುದರಿಂದ ಸದರಿಯವರನ್ನು ಮುಂದಿನ ಆದೇಶದವರೆವಿಗೂ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿಯೇ ಮುಂದುವರೆಸಲಾಗಿದೆ.

ಸದರಿ 7 ಮಂದಿ ಅರೆಕಾಲಿಕ ನೌಕರರುಗಳ ಪೈಕಿ ಶ್ರೀಮತಿ. ಆರ್. ಗೀತಾ. ದ್ವಿ.ದ.ಗು ರವರು ದಿ:31–12–2010ರಂತೆ ಮನವಿಯನ್ನು ಸಲ್ಲಿಸಿ ಸದರಿಯವರ ಅನಾರೋಗ್ಯದ ಕಾರಣ ಶಾಲಾ ಕರ್ತವ್ಯದಿಂದ ಬಿಡುಗಡೆ ಮಾಡಲು ಕೋರಿರುವಂತೆ, ಈ ಕಛೇರಿ ಸಮ ಸಂಖ್ಯೆಯ ಆಂತರಿಕ ಕಛೇರಿ ಟಿಪ್ಪಣಿ ದಿನಾಂಕ : 29–01–2011 ರಂತೆ ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಪಾಲಿಕೆಯಲ್ಲಿ 6 ಮಂದಿ ಅರೆಕಾಲಿಕ ನೌಕರರುಗಳ ವಿವರಗಳನ್ನು ಈ ಕಛೇರಿ ಆದೇಶ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ : 12.08.2009 ರಂತೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಯವರಿಗೆ ಒದಗಿಸಲು ಕೋರಿರುವಂತೆ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಿರುತ್ತಾರೆ.

| ಕ್ರ. ಸಂ | ಅರೆಕಾಲಿಕ ನೌಕರರ ಹೆಸರು ಮತ್ತು ಪದನಾಮ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳ | ಸಂಚಿತ ವೇತನ | ಷರಾ |
|---|---|---|---|---|
| 1. | ಶ್ರೀ ಪ್ರಕಾಶ, ಪ್ರ.ದ.ಗು | ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆ. | ರೂ.2,000/– | ಸದರಿಯವರು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಪಾಲಿಕೆ ಖಾಯಂ ನೌಕರಾದ ಶ್ರೀಮತಿ ಎಂ.ಕವಿತ, ಪ್ರ.ದ.ಸ.ರವರು ದಿನಾಂಕ:22–11–2010ರಂದು ಜಂಟಿ ಆಯುಕ್ತರು (ಪಶ್ಚಿಮ) ರವರ ಆದೇಶ ಸಂಖ್ಯೆ: ಸ.ಕಂ.ಅ.(ಶ್ರೀರಾಮ)/ಪಿಆರ್/542/10–11 ರಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಾಗೂ ಶ್ರೀ ಪ್ರಕಾಶ, ಅರೆಕಾಲಿಕ ಪ್ರ.ದ.ಗು ರವರು ಈ ಕಛೇರಿಯ ಆದೇಶ ಸಂಖ್ಯೆ:ಬಿ12(3) ಪಿಆರ್/186/00–01, ದಿನಾಂಕ: 23.12.2009 ರಂತೆ ಸಂಚಿತ ವೇತನದ ಮೇಲೆ ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| 2. | ಶ್ರೀ ರಮೇಶ. ಪ್ರಯೋಗಶಾಲೆ ಸಹಾಯಕರು, | ಪಾಲಿಕೆಯ ಪ್ರೌಢ ಶಾಲೆ ವಿದ್ಯಾರಣ್ಯ ನಗರ, ಮಾಗಡಿ ರಸ್ತೆ. | ರೂ.1,400/– | ಸದರಿ ಅರೆಕಾಲಿಕ ನೌಕರರನ್ನು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಸಂಖ್ಯೆ:ಬಿ12(3)ಪಿಆರ್/(3) ಪಿಆರ್/281/95–96, ದಿನಾಂಕ:23–03–1996 ರಂತೆ ದಿನಾಂಕ: 31–03–1996ರವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿ ಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಪಾಲಿಕೆಯಲ್ಲಿ ನೇರ ನೇಮಕಾತಿ ಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಸಂಚಿತ ವೇತನದಲ್ಲಿ ಪಾಲಿಕೆ ಪ್ರೌಢಶಾಲೆ ವಿಜಯನಗರ ಕಾರ್ಯನಿರ್ವಹಿಸಲು ಮುಂದುವರೆಸ ಲಾಗಿರುತ್ತದೆ. ಇದರಂತೆ ಸದರಿಯವರು ಪಾಲಿಕೆ ಪ್ರೌಢಶಾಲೆ ವಿಜಯನಗರ ಇಲ್ಲಿ ವೇತನ ಪಡೆದು ಪಾಲಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| 3. | ಶ್ರೀ.ಲಕ್ಷ್ಮಿನಾರಾಯಣ ನಾ.ದ.ನೌ | ಪಾಲಿಕೆಯ ಪ್ರೌಢ ಶಾಲೆ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ, | ರೂ.1,300/– | ಮುಖ್ಯೋಪಾಧ್ಯಾಯರು, ಪಾಲಿಕೆ ಪ್ರೌಢಶಾಲೆ ವಿಜಯನಗರ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಗಿದಂತೆ, ಸದರಿಯವರ ಶಾಲೆಯಲ್ಲಿ ಜವಾನರ ಮಂಜೂರಾತಿ ಹುದ್ದೆ ಒಂದು ಇದ್ದು ಸದರಿ ಹುದ್ದೆಯಲ್ಲಿ ಪಾಲಿಕೆ ಖಾಯಂ ನೌಕರಾದ ಶ್ರೀ ಎನ್. ರಮೇಶ ರವರು ವೇತನ ಪಡೆದು ಓಓಡಿ ಮೇಲೆ ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಶ್ರೀ ಲಕ್ಷ್ಮಿನಾರಾಯಣ, ಅರೆಕಾಲಿಕ ನಾ.ದ.ನೌ ರವರು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಸಂಖ್ಯೆ:ಬಿ12(3)ಪಿಆರ್/(3)ಪಿಆರ್/281/ 95–96, ದಿನಾಂಕ: 23–03–1996 ರಂತೆ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. |
| 4. | ಶ್ರೀಮತಿ ಮಹಾದೇವಮ್ಮ ನಾ.ದ.ನೌ | ಆರೋಗ್ಯ ಕೇಂದ್ರ, ಗಂಗೊಂಡನಹಳ್ಳಿ | ರೂ.1,300/– | ಯಶವಂತಪುರ ಹೆರಿಗೆ ಆಸ್ಪತ್ರೆಯಲ್ಲಿ ಜವಾನರ ಮಂಜೂರಾತಿ ಹುದ್ದೆಗಳು 3 ಇದ್ದು, ಪಾಲಿಕೆ ಖಾಯಂ ನೌಕರರಾದ ಹೆಚ್.ಜೈರಾಮ್ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 2 ಖಾಯಂ ಜವಾನರ ಹುದ್ದೆಗಳು ಖಾಲಿ ಇದ್ದ ಕಾರಣ ಹಾಲಿ ಖಾಲಿರುವ ಜವಾನರ ಹುದ್ದೆಗೆ ಅರೆಕಾಲಿಕ ಸದರಿ ನೌಕರರನ್ನು ಜವಾನರ ಹುದ್ದೆಗೆ ಸಂಚಿತ ವೇತನ 1300/– ಮೇರೆಗೆ ದಿ:30–03–1996 ರಂತೆ ನೇಮಕಾತಿ ಮಾಡಲಾಗಿದ್ದು ಕಾರ್ಯನಿರ್ವಹಿಸುತ್ತಿರುತ್ತಾರೆ. |
| 5. | ಶ್ರೀ ಜಿ. ಗಂಗಪ್ಪ. ನಾ.ದ.ನೌ | ಆರೋಗ್ಯ ಕೇಂದ್ರ, ಆಂಜನಪ್ಪ ಗಾರ್ಡನ್ ಮೈಸೂರು ರಸ್ತೆ. | ರೂ.1,300/– | |

| | | | | |
|---|---|---|---|---|
| 6. | ಶ್ರೀಮತಿ ಮಂಜುಳಾ ನಾ.ದ.ನೌ. | ಹೆರಿಗೆ ಆಸ್ಪತ್ರೆ. ಕೆ.ಪಿ.ಅಗ್ರಹಾರ | ರೂ.1,300/- | ಸದರಿ ಅರೆಕಾಲಿಕ ನೌಕರರನ್ನು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ:ಬಿ12(3)ಪಿಆರ್/281/95-96, ದಿನಾಂಕ:18-10-1995ರಂತೆ ದಿನಾಂಕ:31-03-1996 ರವರೆಗೆ ಅಥವಾ ಸದರಿ ಹುದ್ದೆಯನ್ನು ನೇರ ನೇಮಕಾತಿ ಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಅರೆಕಾಲಿಕ ಜವಾನರಾಗಿ ಸಂಚಿತ ವೇತನ ರೂ.1300/- ರಂತೆ ಆರೋಗ್ಯ ಇಲಾಖೆಯ ಕೋದಂಡರಾಮಪುರ ಹೆರಿಗೆ ಆಸ್ಪತ್ರೆಗೆ ಖಾಲಿ ಇರುವ ಹುದ್ದೆಗೆ ನೇಮಿಸಿರುವಂತೆ ಸದರಿಯವರು ಕೋದಂಡರಾಮಪುರ ಹೆರಿಗೆ ಆಸ್ಪತ್ರೆಯಲ್ಲಿ ವೇತನ ಪಡೆದು ಮಾಗಡಿ ರಸ್ತೆ ಹೆರಿಗೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |

ಸದರಿ ಅರೆಕಾಲಿಕ ನೌಕರರು ದಿನಾಂಕ:31-08-2010 ಮತ್ತು 21-10-2011 ರಂದು ಮನವಿಯನ್ನು ಸಲ್ಲಿಸಿ, 1995ರಿಂದ ಪಾಲಿಕೆಗೆ ಅರೆಕಾಲಿಕ ನೌಕರಿಗೆ ಸಂಚಿತ ವೇತನದಲ್ಲಿ ಆರು ಜನ ನೌಕರರು ನೇಮಕಗೊಂಡು ತಿಂಗಳಿಗೆ 1300, 1400 ಹಾಗೂ 2000 ರೂ.ಗಳನ್ನು ಪಡೆದುಕೊಂಡು ಕೆಲಸದಲ್ಲಿ ಬಿಡುವಿಲ್ಲದೆ ಕಾರ್ಯನಿರ್ವಹಿಸುತ್ತಾ ಬರುತ್ತಿದ್ದು, ಇಲ್ಲಿಗೆ 16 ವರ್ಷಗಳು ಕಳೆದರೂ ಕೆಲಸದಲ್ಲಿ ಯಾವುದೇ ಭದ್ರತೆಯಿಲ್ಲದೇ ಇದ್ದು ಕಡಿಮೆ ವೇತನದಲ್ಲಿ ನಮ್ಮನ್ನು ದುಡಿಸಿಕೊಳ್ಳುತ್ತಾ ಬರುತ್ತಿದ್ದು, ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದ್ದು, ನೀಡುವ ವೇತನ ಏನೇನೂ ಸಾಕಾಗದೇ ಹೋಗಿರುವುದರಿಂದ ಜೀವನ ಸುಧಾರಿಸಲು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡಲು ಕೋರಿರುತ್ತಾರೆ. ಹಾಗೂ ಮನವಿಯೊಂದಿಗೆ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್‌ಎಲ್‌ಸಿ 84, ಬೆಂಗಳೂರು ದಿನಾಂಕ: 31-12-1986 ಪ್ರತಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್‌ಎಲ್‌ಸಿ 84, ಬೆಂಗಳೂರು ದಿನಾಂಕ: 31-12-1986ರಂತೆ, ನಿಯತಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನಕ್ಕಿಂತ 10/- ರೂ. ಕಡಿಮೆಗೆ ಸಮಾನವಾದ ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ಥಳೀಯ ಅಭ್ಯರ್ಥಿಗಳಿಗೆ ನಿಯತಕಾಲಿಕ ವೇತನವನ್ನು ಮಂಜೂರು ಮಾಡುವ ಬಗ್ಗೆ ಈ ಕೆಳಕಂಡ ಆದೇಶ ನೀಡಿದೆ.

1. ದಿನಾಂಕ:25-11-1977ರ ಆದೇಶದ ಪ್ರಕಾರ ಸಂಚಿತ ವೇತನದ ಆಧಾರದ ಮೇಲೆ ನೇಮಕವಾದ ಎಲ್ಲಾ ಸ್ಥಳೀಯ ಅಭ್ಯರ್ಥಿಗಳಿಗೆ ಅವರ ಹುದ್ದೆಗಳಿಗೆ ನಿಗಧಿಪಡಿಸಿರುವ ವೇತನ ಶ್ರೇಣಿಯನ್ನು ದಿನಾಂಕ:01-04-1986ರಿಂದ ಮಂಜೂರು ಮಾಡತಕ್ಕದ್ದು.
2. ಸಂಚಿತ ವೇತನದ ಆಧಾರದ ಮೇಲೆ ನೇಮಕವಾದ ದಿನದಂದು ಅವರು ನೇಮಕವಾದ ಹುದ್ದೆಗೆ ನಿಗಧಿಪಡಿಸಿರುವ ವೇತನ ಶ್ರೇಣಿಯ ವೇತನವನ್ನು ಮಂಜೂರು ಮಾಡಿದ್ದರೆ ಅವರು ಈ ವೇತನ ಶ್ರೇಣಿಯಲ್ಲಿ ಯಾವ ವೇತನವನ್ನು 1-04-1986ರಂದು ಪಡೆಯುತ್ತಿದ್ದರೋ ಅದೇ ವೇತನವನ್ನು ದಿನಾಂಕ:01-04-1986ರಂದು ನಿಗಧಿಪಡಿಸತಕ್ಕದ್ದು.
3. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ದಿನಾಂಕ: 01-04-1986ಕ್ಕೆ ಮುಂಚೆ ಸ್ಥಳೀಯ ಅಭ್ಯರ್ಥಿಯಾಗಿ ಸಲ್ಲಿಸಿದ ಸೇವೆಗೆ ನಿಗಧಿಪಡಿಸಿದ ವೇತನ ಬಾಕಿಯನ್ನು ಅವರಿಗೆ ಪಾವತಿ ಮಾಡಕೂಡದು.

ಸದರಿ ಸರ್ಕಾರಿ ಆದೇಶ ಸಂಬಂದಿಸಿದಂತೆ ಮುಖ್ಯ ಲೆಕ್ಕಪರೀಶೋಧಕರ ರವರು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್‌ಎಲ್‌ಸಿ 84, ಬೆಂಗಳೂರು ದಿನಾಂಕ: 31-12-1986ರಂತೆ, ನಿಯತಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನಕ್ಕಿಂತ 10/- ರೂ. ಕಡಿಮೆಗೆ ಸಮಾನವಾದ ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ಥಳೀಯ ಅಭ್ಯರ್ಥಿಗಳಿಗೆ ನಿಯತಕಾಲಿಕ ವೇತನವನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿರುತ್ತದೆ. ಈ ಪ್ರಕರಣವು ಅರೆಕಾಲಿಕ ನೌಕರರಿಗೆ ಸಂಬಂಧಿಸಿದ್ದು ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲು ಸೂಚಿಸಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರವರು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್49ಎಸ್‌ಎಲ್‌ಸಿ 84, ದಿನಾಂಕ: 31-12-1986ರಂತೆ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅರೆಕಾಲಿಕ ನೌಕರರಿಗೆ ನಿಯತಕಾಲಿಕ ವೇತನ ನೀಡುವಲ್ಲಿ ಅವಕಾಶಗಳು ಕಂಡುಬರುವುದಿಲ್ಲ. ಮುಖ್ಯ ಲೆಕ್ಕಪರಿಶೋಧಕರು ತಮ್ಮ ಅಭಿಪ್ರಾಯ ವರದಿಯಲ್ಲಿ ವಿವರಿಸಿರುವಂತೆ ನಿಯಮಾನುಸಾರ ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ನಿಗಧಿಪಡಿಸಿರುವ ವೇತನಗಳನ್ನು ಪಾವತಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ದಿನಗೂಲಿ ನೌಕರರುಗಳಿಗೆ ಸಂಬಂದಿಸಿದಂತೆ, ಸರ್ಕಾರದ ಡಿಪಿಎಆರ್, ಹೆಚ್‌ಯುಡಿ ಆದೇಶಗಳು ಈ ಕೆಳಕಂಡಂತೆ ಇರುತ್ತದೆ.

## 1. GOVERNMET ORDER NO. HUD 31 MNE 01, BANGALORE, DATED: 21-08-1995

****

Regularisation of Daily wages/Monthly rated/ time scale employees of all the TMCs/ CMCs/ Corporation and Boards coming under the Control of Housing & Urban Development.

## 2.GOVERNMET ORDER NO.DPAR 12/SLC/97/BANGALORE DATED:26-09-1998

****

Sub: Counting, for the purpose of pension, the service roundered prior to regularization the Daily Wage Employees whose Services have been regularized as per Government Order No. DPAR 2SLC 90, Dated 6.8.1990 read with the subsequent Orders/Instructions.

**3. ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಸುತ್ತೋಲೆ ಸಂಖ್ಯೆ : ಸಿಅಸುಇ 1ಸೇಸ್ಥ 99, ಬೆಂಗಳೂರು, ದಿನಾಂಕ: 24ನೇ ಮಾರ್ಚ 1999.**

**************

ವಿಷಯ: ದಿನಾಂಕ:6ನೇ ಆಗಸ್ಟ್ 1990ರ ಸರ್ಕಾರಿ ಆದೇಶ ಸಂಖ್ಯೆ: ಸಿಅಸುಇ 2 ಸೇಸ್ಥ 90 ಹಾಗೂ ಸಂಬಂಧಿಸಿದ ತದನಂತರದ ಆದೇಶ ಸುತ್ತೋಲೆ ಸಂಖ್ಯೆ: ಅಧಿಕೃತ ಜ್ಞಾಪನಾ ಇತ್ಯಾಧಿಗಳ ಅನ್ವಯ ಸಕ್ರಮಗೊಳಿಸಲಾದ ದಿನಗೂಲಿ ನೌಕರರಿಗೆ ವೇತನದ ಬಾಕಿಯನ್ನು ನೀಡುವ ಕುರಿತು.

ಸುಪ್ರೀಂ ಕೋರ್ಟಿನ ದಿನಾಂಕ:23ನೇ ಫೇಬ್ರವರಿ 1990ರ ತೀರ್ಪಿನ ಪ್ರಕಾರ ದಿನಾಂಕ: 1ನೇ ಜುಲೈ 1984ಕ್ಕಿಂತ ಮುಂದೆ ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಕುರಿತು ಮೇಲೆ (1)ರಲ್ಲಿ ಉಲ್ಲೇಖಿಸಿದ ದಿನಾಂಕ:6ನೇ ಆಗಸ್ಟ್ 1990ರ ಆದೇಶ ಹಾಗೂ ತದನಂತರದ ಆದೇಶ, ಅಧಿಕೃತ ಜ್ಞಾಪನ, ಸುತ್ತೋಲೆ ಇತ್ತಾಧಿಗಳಲ್ಲಿ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಮೇಲೆ (2)ರಲ್ಲಿ ಉಲ್ಲೇಖಿಸಿದ ದಿನಾಂಕ:4ನೇ ಡಿಸೆಂಬರ್ 1990ರ ಅಧಿಕೃತ ಜ್ಞಾಪನದ ಕಂಡಿಕೆ 5ನ್ನು ಈ ಕೆಳಗೆ ಉದ್ಗರಿಸಿದೆ.

"Government hereby direct that necessary action should be taken to regularize the services of the daily rated employees who have completed 10 years of service as on 31st December 1989, immediately with effect from 1st January 1990"

ಆದರೆ ಹಲವು ಪ್ರಕರಣಗಳಲ್ಲಿ ಅರ್ಹ ದಿನಗೂಲಿ ನೌಕರರ ಸೇವೆಯನ್ನು ಅವರು ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತಕ್ಷಣ ಸಕ್ರಮಗೊಳಿಸಿ, ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳು ಸಕ್ರಮವಾಗಿ ಆದೇಶಗಳನ್ನು ಹೊರಡಿಸಿರುವುದಿಲ್ಲ. ಇದರ ಪರಿಣಾಮವಾಗಿ ಅವರು ಸಕ್ರಮಾತಿ ಹೊಂದಲು ಅರ್ಹತೆಯನ್ನು ಹೊಂದಿದ ದಿನಾಂಕ ಮತ್ತು ಅವರನ್ನು ಸಕ್ರಮಗೊಳಿಸಿ ಆದೇಶ ಹೊರಡಿಸಿದ ದಿನಾಂಕ ಈ ಎರಡೂ ಘಟನೆಗಳ ನಡುವೆ ಕಾಲದ ಅಂತೆ (time gap) ಆಗಿರುತ್ತದೆ. ಅವರು ಪಡೆಯಲು ಅರ್ಹರಿರುವ ವೇತನದ ಬಾಕಿಯನ್ನು ಸದರಿ ಅವಧಿಗಾಗಿ ವಿಳಂಬ ಮಾಡದೇ ನೀಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

**4. ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಆದೇಶ ಸಂಖ್ಯೆ: ಸಿಆಸುಇ/15/ಸೇಸಅ/2004, ಬೆಂಗಳೂರು ದಿನಾಂಕ: 08–07–2004**

*********

ವಿಷಯ: ದಿನಗೂಲಿ ಆಧಾರದ ಮೇಲೆ ಮಾಸಿಕ ವೇತನ ಸಿಬ್ಬಂದಿಯಾಗಿ ಸಲ್ಲಿಸಿರುವ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯ ಪರಿಗಣಿಸುವ ಕುರಿತು.

## 5. GOVERNMENT ORDER NO. DPEA 12/SLC/90/BANGALORE DATED 26-09-1998

****

Subject: Regularization of Casual/Daily Rated Employees-Orders thereon

ಮೇಲ್ಕಂಡ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳನ್ವಯ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ನೌಕರರುಗಳ ಸೇವೆಯನ್ನು ಸಕ್ರಮಗೊಳಿಸಲು ಹಾಗೂ ವೇತನ ಶ್ರೇಣಿ ನಿಗದಿಪಡಿಸಲು ಕಾನೂನು ಕೋಶದ ಮುಖ್ಯಸ್ಥರು ರವರ ಅಭಿಪ್ರಾಯ ಕೋರಲಾಗಿದ್ದು, ಕಾನೂನು ಕೋಶದ ಮುಖ್ಯಸ್ಥರು ರವರ ವರದಿ ಸಂಖ್ಯೆ:ಬಿಬಿಎಂಪಿ/ಎಲ್ ಸಿ/ಆರ್ಆರ್/2181/2011–12 ದಿ:11–01–2012ರಂತೆ ಈ ಕೆಳಕಂಡಂತೆ ವರದಿಯನ್ನು ನೀಡಿರುತ್ತಾರೆ.

ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ನೌಕರನ್ನು ಖಾಯಂಗೊಳಿಸುವ ಬಗ್ಗೆ/ವಿಷಯದಲ್ಲಿ ಕುರಿತಂತೆ ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ ಹಾಗೂ ತೀರ್ಪಿನ/ಹಿನ್ನೆಲೆಯಲ್ಲಿ ಗುತ್ತಿಗೆ ನೌಕರರನ್ನು ಸಕ್ರಮಗೊಳಿಸುವಲ್ಲಿ

ಪರಿಶೀಲಿಸಲಾಯಿತು. ಮುಂದುವರೆಸಂತೆ ದಿನಾಂಕ: 24–03–2010ರಲ್ಲಿನ ಸರ್ಕಾರದ ಪತ್ರಗಳಂತೆ ವಿವರವಾಗಿ ಪರಿಶೀಲಿಸಲಾಯಿತು.

Superme Court of India.
Appeal (Civil) 3595-3612/1999
State of Karnataka and others.
v/s
Smt. Uma Devi and others .

The operative portion of the order passed by Supreme Court of India in Civil Appeal No.3595-3612/1999 dated: 10-04-2006.

In cases relating to service in the commercial taxes department, the High Court has directed that those engaged on daily wages, be paid wages equal to the salary and allowances that are being paid to the regular employees of their cadre in government service, with effect from the dates from which they were respectively appointed. The objection taken was to the direction for payment from the dates of engagement. We find that the high court had clearly gone wrong in directing that these employees be paid salary equal to the salary and allowances that are being paid to the regular employees of their cadre in government service, with effect from the dates from which they were respectively engaged or appointed. It was not open to the high court to impose such an obligation on the state when the very question before the high court in the case was whether these employees were entitled to have equal pay for equal work so called and were entitled to any other benefit. They had also been engaged in the teeth of directions not to do so. We are, therefore, of the view that, at best, the division bench of the high court should have directed that wages equal to the salary that are being paid to regular employees be paid to these daily wage employees with effect from the date of its judgment. Hence, that part of the direction of the division bench is modified and it is directed that these daily wage earners be paid wages equal to the salary at the lowest grade of employees of their cadre in the Commercial Taxes Department in government in government services, from the date of the judgment of the division bench of the high court. Since, they are only daily wage earners there would be no question of other allowances being paid to them. In view of our conclusion, that courts are not expected to issue direction for making such persons permanent in service we set aside that part of the direction of the high court directing the government to consider their cases for regularization. We also notice that the high court has not adverted to the aspect as to whether it was regularization or it was giving permanency that was being directed by the high court. In such a situation, the direction in that regard will stand deleted and the appeals filed by the state would stand allowed to that extend. If sanctioned posts are vacant (they are said to be vacant) the state will take immediate steps for filling those posts by an regular process of selection. But when regular recruitment is undertaken, the respondents in C.A.No.3595-3612 and those in the Commercial Taxes Department similarly situated, will be allowed to compete, waiving the age restriction impose for the recruitment and giving some weightage for their having been engaged for work in the Department for a significant period of time. That would be the extent of the exercise of power by this court article 142 of the constitution to do justice to them.

Coming to Civil Appeal No. 1861-2063 of 2011, in view of our conclusion on the questions referred to, no relief can be granted, that too to an indeterminate number of members of the association. These appointments or engagement were also in the teeth of directions of the Government not to make such appointments and it is impermissible to recognize such appointments made in the teeth of directions issued by the Government in that regard. We have also held that they are not legally entitled to any such relief. Granting of the relief claimed would mean paying a premium for defiance and insubordination by those concerned who engaged these persons against the

interdict in that behalf. Thus, on the whole, the appellants in these appeals are found to be not entitled to any relief. These appeals have, therefore, to be dismissed.

ಪ್ರಸ್ತಾಪಿತ ವಿಷಯದಲ್ಲಿ ಸರ್ಕಾರದ ಆದೇಶಗಳು ಹಾಗೂ ಸುತ್ತೋಲೆಗಳ ಅನ್ವಯ (1) ಸದರಿ ಅಧಿಕಾರಿ/ನೌಕರರನ್ನು ಸಕ್ರಮಗೊಳಿಸುವಲ್ಲಿ, (2) ವೇತನ ಶ್ರೇಣಿ ನಿಗದಿ ಪಡಿಸುವ ಹಾಗೂ ಬಾಕಿ ಸೌಲಭ್ಯಗಳನ್ನು ನೀಡುವ ಕುರಿತಂತೆ ಕ್ರಮವಹಿಸುವುದು ಸಮಂಜಸವಲ್ಲವೆಂದು ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶ/ಮಾರ್ಗ ಸೂಚಿಗಳಂತೆ ಕ್ರಮವಹಿಸುವುದು ಅತ್ಯಂತ ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಮೇಲ್ಕಂಡ ವಿವರವಾದ ಅಂಶಗಳ ಹಿನ್ನೆಲೆಯಲ್ಲಿ, ಸದರಿ 6 ಮಂದಿ ಅರೆಕಾಲಿಕ ನೌಕರರು ಮನವಿ ಸಲ್ಲಿಸಿ, 1995ರಿಂದ ಪಾಲಿಕೆಯಲ್ಲಿ ಅರೆಕಾಲಿಕ ನೌಕರಿಗೆ ಮಾಹೆಯಾನ ರೂ. 1300, 1400, ಹಾಗೂ 2000 ಗಳ ಸಂಚಿತ ವೇತನವನ್ನು ಪಡೆದು 16 ವರ್ಷಗಳಿಂದ ಕೆಲಸದಲ್ಲಿ ಯಾವುದೇ ಭದ್ರತೆಯಿಲ್ಲದೇ ಕಡಿಮೆ ವೇತನದಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿರುವುದರಿಂದ ನಿಯತಕಾಲಿಕ ವೇತನ ಪಾವತಿಸಲು ಕೋರಿರುವ ಸಂಬಂಧ ಸೂಕ್ತ ತೀರ್ಮಾನ ಕೈಗೊಳ್ಳಲು ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಪ್ರಸ್ಥಾವನೆ ಕುರಿತಂತೆ ದೀರ್ಘವಾದ ಚರ್ಚೆಯ ನಂತರ ಆಯುಕ್ತರ ದಿ॥ 23.06.2012ರ ಟಿಪ್ಪಣಿಯ ರೀತ್ಯಾ ನಿಯತಕಾಲಿಕ ವೇತನ ಪಾವತಿಸಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 16.07.2012ರ ನಿರ್ಣಯ.

**ನಿರ್ಣಯ: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿ॥ 16/07/2012ರ ನಿರ್ಣಯವನ್ನು ಒಪ್ಪಲಾಯಿತು.**

## *03]. ವಿಷಯದ ಸಂಖ್ಯೆ :-ತೆಆಸ್ಥಾಸ/104/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್.ಎ.ಕ್ಯೂ/ಪಿಆರ್/ಟಿ.ನಿ.ಸಿ/01/2012-13, ದಿನಾಂಕ: 13-07-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಕ್ತ ಸಿಬ್ಬಂದಿ ಇಲ್ಲದ ಕಾರಣ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರು ಮತ್ತು ಸರ್ವೇಯರ್‌ಗಳನ್ನು ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 20 (ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03-03-2010 ರಂದು ಈ ಕಛೇರಿ ಆದೇಶದ ಸಂಖ್ಯೆ : ಸ.ಆ.(ಆಸ್ತಿ) ಜಿಎಲ್/2428/2009-10, ದಿನಾಂಕ : 03.03.2010, 09.04.2010, 11.05.2010, 08.06.2010 ಹಾಗೂ 04.08.2010ರನ್ವಯ ನೇಮಕ ಮಾಡಿಕೊಳ್ಳಲಾಗಿತ್ತು. ಈ ಹುದ್ದೆಗಳಿಗೆ ಸರ್ಕಾರವು, ಸರ್ಕಾರದ ಆದೇಶ ಸಂಖ್ಯೆ : ನಇ/395/ಎಂ.ಎನ್.ಯು/2009, ದಿನಾಂಕ 23.12.2009 ರಂತೆ ಅನುಮೋದನೆ ನೀಡಿದ್ದು ಅದರ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ನೇಮಕ ಮಾಡಲಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಆಯುಕ್ತರು | 16,000 | 3 |
| 2 | ತಹಶೀಲ್ದಾರ್‌ರು | 14,000 | 4 |
| 3 | ಶಿರಸ್ತೇದಾರ್‌ರು | 12,000 | 4 |
| 4 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 8 |
| 5 | ಮೋಜಣಿದಾರರು | 10,000 | 8 |
| 6 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 8 |

ಮೇಲ್ಕಂಡ ಸರ್ಕಾರದ ಆದೇಶದಂತೆ ಆಯ್ಕೆ ಪ್ರಕ್ರಿಯೆ ನಡೆಸಿ ಒಟ್ಟು 36 ಮಂದಿ ಗುತ್ತಿಗೆ ಅಧಿಕಾರಿ/ಸಿಬ್ಬಂದಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದು, ಅವರಲ್ಲಿ ಕರ್ತವ್ಯಕ್ಕೆ ಹಾಜರಾದ 32 ಮಂದಿಯನ್ನು ಬಿಬಿಎಂಪಿ ಯ 8 ವಲಯಗಳಿಗೆ ಅವಶ್ಯಕತೆಗನುಸಾರ ನಿಯೋಜನೆ ಮಾಡಲಾಗಿತ್ತು. ಅವರ ಗುತ್ತಿಗೆ ಅವಧಿಯು ದಿ: 02-03-2011 ಕ್ಕೆ ಮುಕ್ತಾಯಗೊಂಡಿದ್ದು, ವಲಯಗಳಿಂದ ಪಡೆದ ವರದಿ ಮತ್ತು ಟಿ.ಡಿ.ಆರ್ ಯೋಜನೆಯಲ್ಲಿನ ಪ್ರಗತಿ ಪರಿಶೀಲನೆ ಮಾಡಿ 2011-12 ನೇ ಸಾಲಿಗೆ ಸದರಿ ಹುದ್ದೆಗಳನ್ನು 24 ಕ್ಕೆ ಕಡಿತಗೊಳಿಸಿ ಮುಂದುವರೆಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ : ನಇ/395/ಎಂ.ಎನ್.ಯು/2009, 23.12.2009 ರಂತೆ ಸರ್ಕಾರದ ಅನುಮೋದನೆ ಪಡೆಯಲಾಗಿತ್ತು ಹಾಗೂ ಈ ಅವಧಿಯಲ್ಲಿ ಕೆಲವು ಗುತ್ತಿಗೆ ಸಿಬ್ಬಂದಿ ವೈಯಕ್ತಿಕ ಕಾರಣದ ಮೇಲೆ ರಾಜೀನಾಮೆ ನೀಡಿದ್ದು ಮತ್ತು ಕೆಲವರನ್ನು ಅವರ

ಕಾರ್ಯಪ್ರಗತಿಯು ತೃಪ್ತಿಕರವಾಗಿಲ್ಲದ್ದರಿಂದ ಪಾಲಿಕೆಯಿಂದ ಬಿಡುಗಡೆಗೊಳಿಸಲಾಗಿತ್ತು. ಅದರಂತೆ 2011–12ನೇ ಸಾಲಿಗೆ ಗುತ್ತಿಗೆ ಅವಧಿಯು ಮುಕ್ತಾಯಗೊಂಡಂತೆ ಅಂದರೆ ದಿ:02–03–2012 ರಂತೆ ಪಾಲಿಕೆಯ ಭೂಸ್ವಾಧೀನ ಮತ್ತು ಟಿ.ಡಿ.ಆರ್ ವಿಭಾಗದಲ್ಲಿ ಕೇವಲ 14 ಮಂದಿ ಗುತ್ತಿಗೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಿವೃತ್ತ ಅಧಿಕಾರಿ/ನೌಕರರುಗಳ ಗುತ್ತಿಗೆ ಅವಧಿಯು ದಿ: 02–03–2012 ಕ್ಕೆ ಮುಕ್ತಾಯಗೊಂಡಿದ್ದು, ಹೊಸ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಅಥವಾ ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 80 (ಎ) ಈ1) ಮತ್ತು (2) ರಲ್ಲಿ ಅವಕಾಶವಿರುವಂತೆ ಮುಂದಿನ ತಿಂಗಳ ಅವಧಿಗೆ ಅಂದರೆ ದಿ: 31–05–2012 ರವರೆಗೆ ಗುತ್ತಿಗೆ ಸೇವೆಯಲ್ಲಿ ಮುಂದುವರೆಸಲಾಗಿದೆ.

ಮುಂದುವರೆದಂತೆ, ಪಾಲಿಕೆಯ ಭೂಸ್ವಾಧೀನ ಮತ್ತು ಟಿ.ಡಿ.ಆರ್ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರು, ಸರ್ವೇಯರ್ ಗಳನ್ನು ಮರು ನೇಮಕ ಮಾಡಿಕೊಳ್ಳುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಲ್ಲಿನ ಅಪರ/ಜಂಟಿ ಆಯುಕ್ತರುಗಳಿಂದ ವರದಿ ಪಡೆದು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯದ ಪ್ರಗತಿ ಬಗ್ಗೆ ಈ ಕೆಳಕಂಡಂತೆ ಪರಿಶೀಲನೆ ಮಾಡಲಾಗಿದೆ.

1. ಯಲಹಂಕ ವಲಯ :– ಈ ವಲಯದಲ್ಲಿ ಹಾಲಿ ಒಬ್ಬ ತಹಶೀಲ್ದಾರ್, ರಾನಿ/ಪ್ರ.ದ.ಸ. ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 7 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 3,000 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 322 ಮತ್ತು 96 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ವಲಯದ ಜಂಟಿ ಆಯುಕ್ತರು ತಮ್ಮ ವರದಿಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ತಹಶೀಲ್ದಾರ್/ರಾನಿ/ಪ್ರ.ದ.ಸ. ಹಾಗೂ ನಿವೃತ್ತ ಸರ್ವೇಯರ್‌ನ್ನು ಮುಂದುವರೆಸುವಂತೆಯೂ ಹಾಗೂ ಹೆಚ್ಚುವರಿಯಾಗಿ ಒಬ್ಬ ನಿವೃತ್ತ ಸರ್ವೇಯರ್ ಹುದ್ದೆ ನೀಡುವಂತೆ ಕೋರಿರುತ್ತಾರೆ. ಈ ವಲಯಕ್ಕೆ ಒಬ್ಬ ತಹಶೀಲ್ದಾರ್ ಒಬ್ಬರು ಕಂದಾಯ ನಿರೀಕ್ಷಕರು ಮತ್ತು ಇಬ್ಬರು ಸರ್ವೇಯರ್‌ಗಳನ್ನು ನೇಮಕಗೊಳಿಸಬಹುದಾಗಿದೆ.
2. ಮಹದೇವಪುರ ವಲಯ :– ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 11 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 4,187 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 173 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ದೂರವಾಣಿ ಕರೆ ಮಾಡಿ ಹಾಲಿ ಕರ್ತವ್ಯನಿರತ ತಹಶೀಲ್ದಾರ್/ಗ್ರಾಮ ಲೆಕ್ಕಿಗ ಹಾಗೂ ನಿವೃತ್ತ ಸರ್ವೇಯರ್‌ಗಳ ಹುದ್ದೆಗಳನ್ನು ಮುಂದುವರಿಸುವಂತೆಯೂ ಹಾಗೂ ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಒಬ್ಬ ಸರ್ವೇಯರ್ ಹಾಗೂ ಒಬ್ಬ ಗ್ರಾ.ಲೆ/ದ್ವಿ..ದ.ಸ. ರವರ ಹುದ್ದೆಗಳನ್ನು ನೇಮಕಗೊಳಿಸಬೇಕಾಗಿದೆ.
3. ದಾಸರಹಳ್ಳಿ ವಲಯ :– ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 22 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ವಲಯದ ಜಂಟಿ ಆಯುಕ್ತರು ದೂರವಾಣಿ ಮೂಲಕ ತಿಳಿಸಿದ ಮೇರೆಗೆ ಒಬ್ಬರು ರಾನಿ/ಪ್ರ.ದ.ಸ ಹಾಗೂ ಒಬ್ಬರು ಸರ್ವೇಯರ್ ಹುದ್ದೆಯನ್ನು ನೇಮಕಾತಿ ಮಾಡಿಸಿಕೊಳ್ಳಲು ಕೋರಿದ್ದಾರೆ. ಇವರಿಗೆ ಎರಡು ಸಿಬ್ಬಂದಿಗಳನ್ನು ನೀಡಬಹುದಾಗಿದೆ.
4. ಬೊಮ್ಮನಹಳ್ಳಿ ವಲಯ :– ಈ ವಲಯದಲ್ಲಿ 38 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 13 ರಸ್ತೆಗಳ ಅಗಲೀಕರಣ ಕಾರ್ಯ ಕೈಗೊಂಡಿದ್ದು, ಅಂದಾಜು 314 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಈ ವಲಯದಲ್ಲಿ 14 ಡಿ.ಆರ್.ಸಿ.ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು ಸಮರ್ಪಕವಾಗಿರುವದಿಲ್ಲ. ದೂರವಾಣಿ ಮುಖಾಂತರ ವಿಚಾರಿಸಿದ ಮೇರೆಗೆ ಹಾಲಿ ಕರ್ತವ್ಯ ನಿರತ ರಾನಿ/ಪ್ರ.ದ.ಸ ಮತ್ತು ಆಸ್ತಿ ವಿಭಾಗ ಸರ್ವೇಯರ್ ರವರೊಂದಿಗೆ ಹೊಸದಾಗಿ ಶಿರಸ್ತೇದಾರ(1) ನಿವೃತ್ತ ಸರ್ವೇಯರ್(1) ಹಾಗೂ ಗ್ರಾಮಲೆಕ್ಕಿಗ/ ದ್ವಿ.ದ.ಸ(1) ಹುದ್ದೆಗಳನ್ನು ನೇಮಕ ಮಾಡಿಸಿ ಕೊಡಲು ಕೋರಿರುತ್ತಾರೆ. ಪ್ರಸ್ತಾವನೆ ನಿರೀಕ್ಷಿಸಲಾಗಿದೆ. ಶಿರಸ್ತೇದಾರ್ ಮತ್ತು ರಾ.ನಿ/ಪ್ರ.ದ.ಸ ಗ್ರಾ.ಲೆ/ದ್ವಿ.ದ.ಸ ಹಾಗೂ ಸರ್ವೇಯರ್ ಹುದ್ದೆ ಹೊಸದಾಗಿ ನೇಮಿಸಿಕೊಡುವಂತೆ ಕೋರಿರುತ್ತಾರೆ. ಇವರಿಗೆ ನಾಲ್ಕ ಸಿಬ್ಬಂದಿಗಳನ್ನು ನೀಡಬಹುದಾಗಿದೆ.
5. ರಾಜರಾಜೇಶ್ವರಿನಗರ ವಲಯ :– ಈ ವಲಯದಲ್ಲಿ 17 ರಸ್ತೆಗಳನ್ನು ರಸ್ತೆ ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ದೂರವಾಣಿ ಕರೆ ಮೇಲೆ ಹೊಸದಾಗಿ ನೇಮಕಾತಿ ಮಾಡಿಕೊಳ್ಳಲು ನಿವೃತ್ತ ಸರ್ವೇಯರ್ ಹುದ್ದೆಯ ಜೊತೆಗೆ ಒಬ್ಬರು ತಹಶೀಲ್ದಾರ್, ಶಿರಸ್ತೇದಾರ್(1) ರಾನಿ./ಪ್ರ.ದ.ಸ.(1) ನಿವೃತ್ತಿ

ಸರ್ವೆಯರ್ (1) ಗ್ರಾಮ ಲೆಕ್ಕಿಗ(1) ಹೊಸದಾಗಿ ನೇಮಕ ಮಾಡಿಸಿಕೊಡಲು ಕೋರಿದ್ದು ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. ಆದರೆ ಈ ವಲಯಕ್ಕೆ ಒಬ್ಬ ರಾ.ನಿ/ಪ್ರ.ದ.ಸ ಹಾಗೂ ಒಬ್ಬ ಸರ್ವೆಯರ್ ಒಟ್ಟು ಎರಡು ಸಿಬ್ಬಂದಿಗಳನ್ನು ನೀಡಬಹುದಾಗಿದೆ.

6. ಪೂರ್ವ ವಲಯ:– ಈ ವಲಯದಲ್ಲಿ ಒಬ್ಬ ಶಿರಸ್ತೇದಾರ್, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 24 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 1,737 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ವಲಯದಲ್ಲಿ 26 ಡಿ.ಆರ್.ಸಿ.ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಆದರೆ, ವಲಯ ಜಂಟಿ ಆಯುಕ್ತರಿಂದ ಬಂದಿರುವ ವರದಿ ಪ್ರಕಾರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಶಿರಸ್ತೇದಾರ್, ನಿವೃತ್ತಿ ಸರ್ವೆಯರ್ ರವರ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಹಾಲಿ ಇರುವ ಶಿರಸ್ತೇದಾರು ಮತ್ತು ಸರ್ವೆಯರ್ ರವರ ಹುದ್ದೆಯನ್ನು ಮುಂದುವರಿಸಿ ಹೊಸದಾಗಿ ಒಬ್ಬರು ಶಿರಸ್ತೇದಾರ್, ರಾ.ಲೆ/ದ್ವಿ.ದ.ಸ ಹಾಗೂ ಸರ್ವೆಯರ್ ಒಟ್ಟು ಮೂರು ಜನರನ್ನು ನೀಡಬಹುದಾಗಿದೆ.
7. ದಕ್ಷಿಣ ವಲಯ :– ಈ ವಲಯದಲ್ಲಿ 14 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 6 ರಸ್ತೆಗಳಲ್ಲಿ ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ವಲಯದ ಅಪರ ಆಯುಕ್ತರ ವರದಿಯ ಪ್ರಕಾರ ಹಾಲಿ ಇರುವ ಹುದ್ದೆ ಕಂದಾಯ ನಿರೀಕ್ಷಕರು ಮತ್ತು ಸರ್ವೆಯರ್ ಹುದ್ದೆಗಳನ್ನು ಹಾಲಿ ಇರುವ ಹುದ್ದೆ ಕಂದಾಯ ನಿರೀಕ್ಷಕರು ಮತ್ತು ಸರ್ವೆಯರ್ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಎರಡು ಹುದ್ದೆಗಳನ್ನು ಈ ವಲಯಕ್ಕೆ ನೀಡಬಹುದಾಗಿದೆ.
8. ಪಶ್ಚಿಮ ವಲಯ :– ಈ ವಲಯದಲ್ಲಿ ಹಲವು ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಲಾಗಿರುವುದಿಲ್ಲ. ಈ ವಲಯದಲ್ಲಿ ಯಾವುದೇ ಪ್ರಗತಿ ಆಗಿರುವುದಿಲ್ಲ ಹಾಗೂ ವರದಿ ಸಹ ಬಂದಿರುವುದಿಲ್ಲ, ಈಗ ಉಳಿದ ಯಾವುದೇ ನೌಕರರು ಕೆಲಸ ಮಾಡುತ್ತಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಅವಶ್ಯಕತೆ ಉಂಟಾದಲ್ಲಿ ಬೇರೆ ವಲಯಗಳಿಂದ ನಿಯೋಜಿಸಬಹುದಾಗಿದೆ.
9. ಕೇಂದ್ರ ಕಛೇರಿ :– ಕೇಂದ್ರ ಕಛೇರಿಯ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಶಾಖೆಯಲ್ಲಿ ಒಬ್ಬ ಪ್ರ.ದ.ಸ ಹಾಗೂ ಒಬ್ಬ ದ್ವಿ.ದ.ಸ/ಗ್ರಾ.ಲೆ. ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಕರ್ತವ್ಯ ನಿರತ ಹುದ್ದೆಗಳನ್ನು ಮುಂದುವರೆಸಬಹುದಾಗಿರುತ್ತದೆ.

| ಕ್ರ ಸಂ | ವಲಯ | ಅಗತ್ಯತೆಯ ಅನುಸಾರ ವಲಯದ ಅಪರ/ಜಂಟಿ ಆಯುಕ್ತರು ಕೋರಿರುವ ಹುದ್ದೆಗಳು | | | | | ಒಟ್ಟು ಹುದ್ದೆ ಸಂಖ್ಯೆ |
|---|---|---|---|---|---|---|---|
| | | ತಹಶೀಲ್ದಾರ್ | ಶಿರಸ್ತೇದಾರ್ | ರಾನಿ/ಪ್ರ.ದ.ಸ | ಗ್ರಾಮ ಲೆಕ್ಕಿಗರು/ ದಿ.ದ.ಸ. | ಸರ್ವೆಯರ್ | |
| 1 | ಯಲಹಂಕ | 1 | – | 1 | – | 2 | 4 |
| 2 | ದಾಸರಹಳ್ಳಿ | – | – | 1 | – | 1 | 2 |
| 3 | ಮಹದೇವಪುರ | 1 | – | – | 1 | 1 | 3 |
| 4 | ಪೂರ್ವ | – | 1 | – | 1 | 1 | 3 |
| 5 | ಬೊಮ್ಮನಹಳ್ಳಿ | – | 1 | 1 | 1 | 1 | 4 |
| 6 | ದಕ್ಷಿಣ | – | – | 1 | – | 1 | 2 |
| 7 | ರಾ.ರಾ.ನಗರ | – | – | 1 | – | 1 | 2 |
| 8 | ಪಶ್ಚಿಮ | – | – | – | – | – | – |
| 9 | ಕೇಂದ್ರ ಕಛೇರಿ | – | – | 1 | 1 | – | 2 |
| | ಒಟ್ಟು | 2 | 2 | 6 | 4 | 8 | 22 |

ಮೇಲೆ ತಿಳಿಸಿರುವಂತೆ ಭೂಸ್ವಾಧೀನ ಹಾಗೂ ಟಿ.ಡಿ.ಆರ್. ಕಾರ್ಯನಿರ್ವಹಣೆಗಾಗಿ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯ ಪಾಲಿಕೆಗೆ ಅತ್ಯಗತ್ಯವಾಗಿಬೇಕಾಗಿದ್ದು ಪ್ರಸ್ತುತ ಇತರೆ ಸರ್ಕಾರಿ ನೌಕರರ ವೇತನವನ್ನು ಸರ್ಕಾರವು ಹೆಚ್ಚಿಸಿರುವುದರಿಂದ ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ

ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡಂತೆ ಮಾಹೆಯಾನ ಪರಿಷ್ಕೃತ ಸಂಚಿತ ವೇತನವನ್ನು ನಿಗಧಿಪಡಿಸಿ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ಅವಶ್ಯಕ ಹುದ್ದೆಗಳ ಸಂಖ್ಯೆ |
|---|---|---|---|
| 1 | ತಹಶೀಲ್ದಾರ್‌ರು | 16,000 | 2 |
| 2 | ಶಿರಸ್ತೇದಾರ್‌ರು | 14,000 | 2 |
| 3 | ಕಂದಾಯ ನಿರೀಕ್ಷಕರು/ಪ್ರ.ದ.ಸ | 12,000 | 6 |
| 4 | ಮೋಜಣಿದಾರರು | 12,000 | 8 |
| 5 | ಗ್ರಾಮಲೆಕ್ಕಿಗರು/ದ್ವಿ.ದ.ಸ | 10,000 | 4 |
| | ಒಟ್ಟು | | 22 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪಾಲಿಕೆಯಲ್ಲಿ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಕಾರ್ಯಗಳನ್ನು ನಿರ್ವಹಿಸಲು ಕಂದಾಯ ಇಲಾಖೆಯ 22 ಮಂದಿ ನಿವೃತ್ತ ಅಧಿಕಾರಿ/ನೌಕರರುಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳ 1977 ರ ನಿಯಮ 20 (ಎ) ರನ್ವಯ ಹುದ್ದೆಯ ಕಾಣಿಸಿರುವ ಕ್ರೋಢಿಕೃತ ಸಂಚಿತ ವೇತನದ ಆಧಾರದ ಮೇಲೆ ದಿ: 01-06-2012 ರಿಂದ ಒಂದು ವರ್ಷದ ಅವಧಿಗೆ ಅಥವಾ ಅವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕಾತಿ ಮಾಡಿಕೊಂಡು ಅವರ ಸಂಚಿತ ವೇತನ ವೆಚ್ಚವನ್ನು ಪಾಲಿಕೆಯ 2012-13ನೇ ಸಾಲಿನ ಆಯವ್ಯಯದಲ್ಲಿ ಭರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸಭೆಯ ಮುಂದೆ ಈ ಕಛೇರಿ ಸಮ ಸಂಖ್ಯೆಯ ಟಿಪ್ಪಣಿ ದಿನಾಂಕ : 05-04-2012 ರಂತೆ ಟಿಪ್ಪಣಿ ಮಂಡಿಸಲಾಗಿತ್ತು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ : 14-06-2012 ರಂದು ಸಭೆಯ ನಡವಳಿಗಳ ವಿಷಯ ಸಂಖ್ಯೆ : ಸಿಆಸುಸ್ಥಾಸ/02/12-13ರ ನಡವಳಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನೌಕರರುಗಳ ಕಾರ್ಯವೈಖರಿ ಕುರಿತಂತೆ ಸಾಕಷ್ಟು ದೂರುಗಳಿದ್ದು, ಈ ಒಂದು ಕಾರ್ಯವನ್ನು ಪಾಲಿಕೆಯ ಖಾಯಂ ನೌಕರರುಗಳ ವೃಂದ್ಧದಿಂದ ನಿರ್ವಹಿಸಲು ಸಾಧ್ಯವಿಲ್ಲವೇ ಎಂಬ ಬಗ್ಗೆ ಸ್ಪಷ್ಟೀಕರಣನೀಡತಕ್ಕದ್ದು". ಎಂಬುದಾಗಿ ಕಡತವನ್ನು ಹಿಂದಿರುಗಿಸಲಾಗಿರುತ್ತದೆ.

ಭೂಸ್ವಾಧೀನ/ಟಿ.ಡಿ.ಆರ್. ಕಾರ್ಯವನ್ನು ಪಾಲಿಕೆಯ ಖಾಯಂ ನೌಕರರ ವೃಂದದಿಂದ ಕಾರ್ಯನಿರ್ವಹಿಸಲು ವಾಸ್ತವಿಕ ದೃಷ್ಟಿಯಿಂದ ಸಮಂಜಸವಾಗಿರುವುದಿಲ್ಲ. ಈ ಬಗ್ಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನೌಕರರುಗಳ ಕಂದಾಯ ಇಲಾಖೆ/ಸರ್ವೇ ಇಲಾಖೆಗಳಲ್ಲಿ ಸುಮಾರು 35 ರಿಂದ 40 ವರ್ಷಗಳವರೆಗಿನ ಸೇವಾ ಅವಧಿಯಲ್ಲಿ ಅಪಾರವಾದ ಅನುಭವ, ಜ್ಞಾನ, ಕುಶಲತೆ ಹಾಗೂ ಪರಿಣಿತಿ ಹೊಂದಿರುವುದರಿಂದ ಇವರುಗಳನ್ನೇ ಪಾಲಿಕೆಯ ಭೂಸ್ವಾಧೀನ/ಟಿ.ಡಿ.ಆರ್. ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಮುಂದುವರೆಸಬಹುದಾಗಿರುತ್ತದೆ. ಒಂದು ವೇಳೆ ಸದರಿ ನಿವೃತ್ತ ನೌಕರರುಗಳ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ನಿರ್ದಿಷ್ಟವಾದ ದೂರುಗಳು ಬಂದಲ್ಲಿ ಕಾನೂನು ರೀತಿಯ ಕ್ರಮ ಜರುಗಿಸಲಾಗವುದೆಂದು ಸ್ಪಷ್ಟೀಕರಿಸುತ್ತಾ, ಮೇಲ್ಕಂಡ ಪ್ರಸ್ತಾವನೆಗೆ ಸೂಕ್ತ ನಿರ್ಣಯ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸಭೆಯ ಮುಂದೆ ಮಂಡಿಸಿರುವ ಪರಿಷ್ಕೃತ ಟಿಪ್ಪಣಿಯ ಮೇರೆಗೆ, ಪ್ರಸ್ತಾವನೆಗೆ ಸಂಬಂಧಿಸಿದಂತೆ ದೀರ್ಘವಾದ ಚರ್ಚೆಯ ನಂತರ ಈ ಪ್ರಕ್ರಿಯೆ ಕುರಿತಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನೌಕರರನ್ನು ಮುಂದುವರೆಸುವ ಕುರಿತಂತೆ ಮಂಡಿಸಿರುವ ಆಯುಕ್ತರ ದಿನಾಂಕ:13/07/2012ರ ಪರಿಷ್ಕೃತ ಟಿಪ್ಪಣಿಯನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಒಪ್ಪಿದೆ.

1. ನಿವೃತ್ತ ನೌಕರರುಗಳು ತಮ್ಮ ದೈನಂದಿನ ಕಛೇರಿ ಕಾರ್ಯ ಚಟುವಟಿಕೆಯ ದಿನಚರಿ (ಡೈರಿ)ಯನ್ನು ದಾಖಲಿಸಿ, ಬಟವಾಡೆ ಅಧಿಕಾರಿಗಳು ದೃಢೀಕರಿಸಿದ ನಂತರ ವೇತನ ಬಿಡುಗಡೆ ಮಾಡಲು ಕ್ರಮಕೈಗೊಳ್ಳತಕ್ಕದ್ದು.
2. ಸದರಿ ನಿವೃತ್ತ ನೌಕರರುಗಳು ತಮಗೆ ವಹಿಸಿರುವ ಕೆಲಸಕಾರ್ಯಗಳಲ್ಲಿ ಕರ್ತವ್ಯ ಲೋಪವೆಸಗಿ ಪಾಲಿಕೆಯ ಕೆಲಸಕಾರ್ಯಗಳಿಗೆ ನಷ್ಟ ಉಂಟಾದ ಪಕ್ಷದಲ್ಲಿ ಸದರಿರವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡತಕ್ಕದ್ದು.
3. ಸದರಿ ನಿವೃತ್ತ ನೌಕರರುಗಳನ್ನು ಹೊರತುಪಡಿಸಿ ಕಛೇರಿಯ ಇತರೆ ಯಾವುದೇ ಸಿಬ್ಬಂದಿ ವರ್ಗದವರಿಂದ ಟಿ.ಡಿ.ಅರ್/ಭೂಸ್ವಾಧೀನ ಪ್ರಕ್ರಿಯೆಯ ಕೆಲಸಕಾರ್ಯಗಳನ್ನು ನಿರ್ವಹಿಸಿದ ಪಕ್ಷದಲ್ಲಿ, ಸಂಬಂಧಪಟ್ಟ ವಲಯ ಜಂಟಿ ಆಯುಕ್ತರವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಶಿಸ್ತಿಗೆ ಒಳಪಡಿಸ ತಕ್ಕದೆಂದು ತಿರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 06.08.2012ರ ನಿರ್ಣಯ.

**ನಿರ್ಣಯ:** **ಆಯುಕ್ತರ ದಿನಾಂಕ : 13.07.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಮೋಜಣಿದಾರರು ಮತ್ತು ಕಂದಾಯ ನಿರೀಕ್ಷಕರು/ ಪ್ರಥಮ ದರ್ಜೆ ಸಹಾಯಕರ ಅವಶ್ಯಕ ಹುದ್ದೆಗಳ ಸಂಖ್ಯೆ ಕಡಿಮೆಯಿದ್ದು, ಮೋಜಣಿದಾರರು ಪ್ರತಿ ವಲಯಕ್ಕೆ ಇಬ್ಬರಂತೆ ಒಟ್ಟು 16 ಹುದ್ದೆಗಳನ್ನು ಹಾಗೂ ಕಂದಾಲು ನಿರೀಕ್ಷಕರು/ ಪ್ರಥಮ ದರ್ಜೆ ಸಹಯಕರು ಪ್ರತಿ ವಲಯಕ್ಕೆ ಒಬ್ಬರಂತೆ ಹಾಗೂ ಕೇಂದ್ರ ಕಛೇರಿಗೆ ಇಬ್ಬರಂತೆ ಒಟ್ಟು 10 ಹುದ್ದೆಗಳನ್ನು ಸಂಚಿತ ವೇತನದ ಮೇಲೆ ಗುತ್ತಿಗೆ ಆಧಾರದ ಮೆಲೆ ನೇಮಕ ಮಾಡಿಕೊಳ್ಳುವ ಮಾರ್ಪಾಡಿನೊಂದಿಗೆ ದಿನಾಂಕ : 06.08.2012ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.**

## *04] ವಿಷಯದ ಸಂಖ್ಯೆ :-ತೆಲಸ್ಥಾಸ/108/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಬಿಬಿಎಂಪಿ/ಜಂ.ಆ(ಯ.ವ)ಪಿಆರ್/1992/12-13, ದಿನಾಂಕ : 23.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ಹೋಬಳಿ, ಕೋಗಿಲು ಗ್ರಾಮ. ಸಂದೀಪ್ ಲೇಔಟ್‌ನ ನಿವಾಸಿಯಾದ ಶ್ರೀ.ಎನ್. ಶ್ರೀನಿವಾಸಲು ಬಿನ್ ನಾಗಪ್ಪ ಎಂಬುವವರು ಇದೇ ಪ್ರದೇಶದ ಗಂಗಾಧರ್ @ ಗಂಗಣ್ಣ ಎಂಬುವರ ಬಿಲ್ಡಿಂಗ್‌ನಲ್ಲಿ ಶ್ರೀ.ಗುರು ಸ್ಟೋರ್ ಎಂಬ ಹೆಸರಿನಲ್ಲಿ ಪ್ರಾವಿಜನ್ ಸ್ಟೋರ್ಸ್ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದು, ದಿನಾಂಕ : 27.10.2011 ರಂದು ಎಲೆಕ್ಟ್ರಿಕ್ ಶಾರ್ಟ್ ಸರ್ಕ್ಯೂಟ್‌ನಿಂದ ಅಂಗಡಿಯಲ್ಲಿದ್ದ ದಿನಸಿ ಸಾಮಾಗ್ರಿಗಳು ಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದ್ದು, ಸುಮಾರು ಎರಡು ಲಕ್ಷಗಳಿಗೂ ಮೆಲ್ಪಟ್ಟು ನಷ್ಟ ಸಂಭವಿಸಿರುವುದಾಗಿ ಸದರಿ ಅಂಗಡಿಯ ಮಾಲೀಕರಾದ ಶ್ರೀ.ಎನ್.ಶ್ರೀನಿವಾಸಲು ರವರು ಬಡವರಾಗಿದ್ದು ಇವರಿಗೆ ಪಾಲಿಕೆಯಿಂದ ನೈಸರ್ಗಿಕ ವಿಕೋಪ ಪರಿಹಾರ ನಿಧಿಯಿಂದ ಗರಿಷ್ಟ ಮೊತ್ತದ ಪರಿಹಾರ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿ ಬ್ಯಾಟರಾಯನಪುರ ವಲಯ ರವರು ಹಾಗೂ ಸಹಾಯಕ ಅಭಿಯಂತರರು ದಾಸರಹಳ್ಳಿ ಉಪ ವಿಭಾಗ ರವರು ಸ್ಥಳ ಮಹಜರ್ ನಡೆಸಿದ್ದು, ಬೆಂಕಿ ಅನಾಹುತದಿಂದ ದವಸ ಧಾನ್ಯಗಳು, ರೆಫ್ರಿಜರೇಟರ್‌ಗಳು ಸುಟ್ಟು ಹೋಗಿರುವ ಬಗ್ಗೆ ದೃಢೀಕರಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು ಸಲ್ಲಿಸಿರುವ ವರದಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಹಾನಿ ಸಂಭವಿಸಿರುವುದಿಲ್ಲವೆಂದು, ಬೆಂಕಿಯಿಂದ ಅಂಗಡಿಯು ಸುಟ್ಟುಹೋಗಿದೆ ಎಂದು ವರದಿ ನೀಡಿದ್ದು ನಷ್ಟ ಪರಿಹಾರ ನೀಡಲು ಪಾಲಿಕೆಯಲ್ಲಿ ಅವಕಾಶವಿದ್ದಲ್ಲಿ ಕ್ರಮವಹಿಸಲು ತಿಳಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರವರ ಆದೇಶ ಸಂಖ್ಯೆ : ಪಾಆಕ/ಸಿಎಎಲ್/ಸಿ.ಆರ್/9/07-08 ದಿನಾಂಕ : 19/24/07 2007 ರ ಆದೇಶದಲ್ಲಿ ರೂ.25.000/- ಗಳನ್ನು ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದ್ದು ಅದರಂತೆ ಪರಿಹಾರ ನೀಡಲು ಕ್ರಮವಹಿಸಬಹುದು ಎಂದು ಕಂದಾಯ ಅಧಿಕಾರಿಗಳು ವರದಿ ನೀಡಿರುತ್ತಾರೆ.

ಸದರಿ ಬೆಂಕಿಯಿಂದ ಆದ ಘಟನೆಯು ಹಿಂದಿನ ಸಾಲಿನಲ್ಲಿ ಸಂಭವಿಸಿದ್ದು, ಆ ದಿನಾಂಕದಂದು ಜಾರಿಯಿದ್ದ ಸಿ.ಆರ್.ಎಫ್ ಗೈಡ್‌ಲೈನ್ಸ್ ಪ್ರಕಾರ ಕ್ರಮವಹಿಸಲು ಉಪ ಆಯುಕ್ತರು (ಯಲಹಂಕ) ರವರು ವರದಿ ಸಲ್ಲಿಸಿರುತ್ತಾರೆ.

ಬೆಂಕಿಯಿಂದ ದಿನಸಿ ಅಂಗಡಿಯು ಸುಟ್ಟು ಹೋಗಿರುವ ಕಾರಣ ಹಾಗೂ ಮೆಲ್ಕಂಡ ಅಂಶಗಳ ಮೇರೆಗೆ ಮಾಲೀಕರಾದ ಶ್ರೀ. ಶ್ರೀನಿವಾಸಲು ರವರಿಗೆ ಪಾಲಿಕೆಯಿಂದ ನಷ್ಟ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಸಹಾಯಕ ಕಾನೂನು ಅಧಿಕಾರಿ ರವರು (ಹೊಸ ವಲಯ) ರವರು ವರದಿ ಸಲ್ಲಿಸಿರುವ ಮೇರೆಗೆ ಇವರು ಪರಿಹಾರಕ್ಕೆ ಅರ್ಹರಲ್ಲ ಎಂಬ ವಿಷಯವನ್ನು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** **ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ : 23.08.2012ರ ಟಿಪ್ಪಣಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು. ಅರ್ಜಿದಾರರಾದ ಶ್ರೀ.ಎನ್.ಶ್ರೀನಿವಾಸಲು ರವರು ಬಡವರಾಗಿದ್ದು, ಸುಮಾರು ಎರಡು ಲಕ್ಷಗಳಿಗೂ ಹೆಚ್ಚು ನಷ್ಟ ಸಂಭವಿಸಿರುವುದರಿಂದ ಇಂತಹ ಹಲವು ಪ್ರಕರಣಗಳಲ್ಲಿ ಪಾಲಿಕೆಯು ಪರಿಹಾರ ನೀಡಿದ್ದು, ಮಾನವೀಯತೆ ದೃಷ್ಟಿಯಿಂದ ಸದರಿಯವರಿಗೆ ರೂ.25,000/- (ಇಪ್ಪತ್ತೈದು ಸಾವಿರ ಮಾತ್ರ) ಗಳನ್ನು ಪರಿಹಾರವಾಗಿ ನೀಡುವ ಮಾರ್ಪಾಡಿನೊಂದಿಗೆ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ**

## *05] ವಿಷಯದ ಸಂಖ್ಯೆ :-ತೆಲಸ್ಥಾಸ/109/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಎ3(2)/ಪಿಆರ್/04/02-13, ದಿನಾಂಕ : 23.08.2012 ರಲ್ಲಿ ವಿವರಿಸಿರುವಂತೆ, ಶ್ರೀ.ಕೆ.ಚೋಳನ್ ರವರ ಪತ್ನಿ ಶ್ರೀಮತಿ.ರುಕ್ಮಿಣಿ ರವರು ತಮ್ಮ ಮನೆಯಲ್ಲಿ ಕ್ರಯಕ್ಕೆ ನೀಡುವ ಬಗ್ಗೆ

ಕೋರಿರುತ್ತಾರೆ. ಇದೇ ರೀತಿ ವಾರ್ಡ್ ಸಂಖ್ಯೆ 81ರಲ್ಲಿ ಇದ್ದಂತಹ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ ಎಂದು ಅದೇ ರೀತಿ ನನಗೂ ಸಹ ಈ ವಸತಿಗೃಹ ಮಾರಾಟ ಮಾಡಲು ಕೋರಿ ಅನೇಕ ಮನವಿಗಳನ್ನು ಹಿಂದಿನಿಂದಲೂ ನೀಡುತ್ತಾ ಬಂದಿರುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ಈ ವಿಷಯ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರವು ತನ್ನ ಆದೇಶದ ಸಂಖ್ಯೆ:ನಅಇ/279/ಎಂಎನ್‌ಜಿ/03, ದಿನಾಂಕ : 25-10-2005ರಂತೆ ಮಹಾನಗರ ಪಾಲಿಕೆಯ ದಿನಾಂಕ:27-07-2003ರ ಸಮಿತಿಯ ವಿಷಯದ ಸಂಖ್ಯೆ:10(284)ರ ನಿರ್ಣಯವನ್ನು ರದ್ದುಪಡಿಸಿದೆ. ಈಗ ಹಾಲಿ ಕೆಳಕಂಡ ಮಹಾನಗರ ಪಾಲಿಕೆ ಸದಸ್ಯರುಗಳು/ಸಚಿವರುಗಳು ಇವರಿಗೆ ವಸತಿ ಗೃಹ ಕ್ರಯಕ್ಕೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

1. ಶ್ರೀ.ಎಸ್.ಕೆ.ನಟರಾಜ್, ಹಿಂದಿನ ಮಹಾಪೌರರು
2. ಶ್ರೀ.ಎಂ.ಕೆ.ಗುಣಶೇಖರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 63, ಜಯಮಹಲ್
3. ಶ್ರೀ ಉದಯಕುಮಾರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 90, ಹಲಸೂರು.
4. ಶ್ರೀ ಆರ್.ಸಂಪತ್‌ರಾಜ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 47 ದೇವರಜೀವನಹಳ್ಳಿ
5. ಶ್ರೀ.ಕಟ್ಟಾಸುಬ್ರಮಣ್ಯ ನಾಯ್ಡು, ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸಚಿವರು.
6. ಶ್ರೀ.ಲಕ್ಷ್ಮೀನಾರಾಯಣ, ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು

ಉಪ ಆಯುಕ್ತರು (ಆಸ್ತಿಗಳು) ರವರು ದಿನಾಂಕ:27-12-2011ರಂದು ಒಂದು ಅಂತರಿಕ ಕಛೇರಿ ಟಿಪ್ಪಣಿ ಕಳುಹಿಸಿ ಶ್ರೀ.ಎಂ.ಉದಯಶಂಕರ್, ವಿರೋಧ ಪಕ್ಷದ ನಾಯಕರು ರವರ ಪತ್ರವನ್ನು ಆಧರಿಸಿ ಇವರಿಗೆ ಅನುಕಂಪದ ಆಧಾರದ ಮೇಲೆ ಕ್ರಯಕ್ಕೆ ಮಂಜೂರು ಮಾಡುವ ಸಂಬಂಧ ಪಾಲಿಕೆ ಸಭೆಯ ಮುಂದೆ ಪ್ರಸ್ತಾವನೆಯನ್ನು ಮರು ಮಂಡಿಸಲು ಕೋರಿರುತ್ತಾರೆ. ಈಗ ಈ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ಪರಿಶೀಲಿಸಿ ಮತ್ತೊಮ್ಮೆ ತೀರ್ಮಾನ ತೆಗೆದುಕೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಸಮಿತಿಯು ಪ್ರಸ್ತಾವನೆ ಪರಿಶೀಲಿಸಿ ಮಾಜಿ ನಗರಸಭಾ ಸದಸ್ಯರಾದ ದಿ॥ ಕೆ. ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರಿಗೆ ಸದರಿ ವಸತಿ ಗೃಹವನ್ನು ಕ್ರಯಕ್ಕೆ ನೀಡಲು ಸಮಿತಿಯು
ತೀರ್ಮಾನಿಸಿ ಮುಂದಿನ ನಿರ್ಣಯಕ್ಕೆ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿರುತ್ತದೆ. ದಿ:29-05-2012 ರಂದು ಪಾಲಿಕೆ ಸಭೆಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುತ್ತದೆ. ಆದರೆ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮೂಂದೂಡಿದೆ-**

## *06] ವಿಷಯದ ಸಂಖ್ಯೆ :-ತೆಆಸ್ಥಾಸ/110/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಉಆ(ಕಂ)ಪಿಆರ್/1369/12-13, ದಿನಾಂಕ : 29.08.2012 ರಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಪ್ರಕರಣ 108ಕ್ಕೆ ತಿದ್ದುಪಡಿ ತಂದು ದಿನಾಂಕ : 1-4-2008 ರಿಂದ ಅನ್ವಯವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿರುವುದು ಸರಿಯಷ್ಟೆ.

ಮುಂದುವರೆದಂತೆ ಕರ್ನಾಟಕ ಸರ್ಕಾರವು ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 110ಕ್ಕೆ ತಿದ್ದುಪಡಿಗಳನ್ನು ತರಲಾಗಿದ್ದು ಸದರಿ ತಿದ್ದುಪಡಿಯಂತೆ ಸೆಕ್ಷನ್ 110(2)(1) ರಲ್ಲಿ ಕರ್ನಾಟಕದ ಶಾಶ್ವತ ನಿವಾಸಿಗಳಾದ ಮಾಜಿ ಸೈನಿಕರು ಮತ್ತು ಅವರ ಅವಲಂಭಿತರಿಗೆ ಸೇರಿದ ಸ್ವಂತ ವಾಸ ಮಾಡುವ ಮನೆ : ನಿವೇಶನಕ್ಕೆ ಆಸ್ತಿ ತೆರಿಗೆಯಲ್ಲಿ ಶೇಕಡ 50 ರಷ್ಟು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಈ ರೀತಿಯಾಗಿ ಸೇವಾ ಶುಲ್ಕವನ್ನು ವಿಧಿಸುವಲ್ಲಿ ಉಲ್ಲೇಖದಲ್ಲಿ ಸರ್ಕಾರವು ಅಧಿಸೂಚನೆ ಹೊರಡಿಸಲಾಗಿದ್ದು ಸದರಿ ಅಧಿಸೂಚನೆಯಂತೆ ಕರ್ನಾಟಕದ ಶಾಶ್ವತ ನಿವಾಸಿಗಳಾದ ಮಾಜಿ ಸೈನಿಕರು ಮತ್ತು ಅವರ ಅವಲಂಭಿತರಿಗೆ ಸೇರಿದ ಸ್ವಂತ ವಾಸ ಮಾಡುವ ಮನೆ : ನಿವೇಶನಕ್ಕೆ ನಗರ ಪಾಲಿಕೆಗೆ ಪಾವತಿ ಮಾಡಬೇಕಾದ ಒಟ್ಟಾರೆ ಆಸ್ತಿ ತೆರಿಗೆ ಮೇಲೆ ಶೇಕಡ 50 ರಷ್ಟನ್ನು ಪಾವತಿ ಮಾಡಬೇಕಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಸೆಕ್ಷನ್ 110ಕ್ಕೆ ತರಲಾಗಿರುವ ತಿದ್ದುಪಡಿಗಳನ್ನು ದಿನಾಂಕ : 1-4-2012 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲು ತೆರಿಗೆ ಮತ್ತು

ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ದಾಖಲೆಗೆ ಟಿಪ್ಪಣಿ ಮಂಡಿಸಲಾಗಿದೆ. ನಿರ್ಣಯದ ನಂತರ ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಸಾರ್ವಜನಿಕರಿಗೆ ಸೂಕ್ತ ತಿಳುವಳಿಕೆಯನ್ನು ನೀಡಿ ಆಸ್ತಿ ತೆರಿಗೆಯನ್ನು ವಸೂಲು ಮಾಡುವ ಪದ್ಧತಿಯನ್ನು ಜಾರಿಗೊಳಿಸಲಾಗುವುದು.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ : 29.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *07] ವಿಷಯದ ಸಂಖ್ಯೆ :-ತೆಆಸ್ಥಾಸ/111/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ ಃ ಉಆ(ಕಂ) ಪಿ.ಆರ್/1366/12-13, ದಿನಾಂಕ : 29-08-2012 ರಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಪ್ರಕರಣ 108ಕ್ಕೆ ತಿದ್ದುಪಡಿ ತಂದು ದಿನಾಂಕ ಃ
1-4-2008 ರಿಂದ ಅನ್ವಯವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿರುವುದು ಸರಿಯಷ್ಟೆ.
ಮುಂದುವರೆದಂತೆ ಕರ್ನಾಟಕ ಸರ್ಕಾರವು ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 295ಕ್ಕೆ ಪೂರಕವಾಗಿ ಸೆಕ್ಷನ್ 295ಎ ರನ್ನು ಜಾರಿಗೆ ತಂದು ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತುತ 2400 ಚದರಡಿ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಹಾಗೂ ಮುಂದೆ 1200 ಚದರಡಿ ನಿವೇಶನದಲ್ಲಿ ನಿರ್ಮಿಸಿಸುತ್ತಿರುವ ಕಟ್ಟಡಗಳಿಗೂ ಸಹ ಮಳೆ ನೀರು ಕೋಯ್ಲು ಅಳವಡಿಸುವುದನ್ನು ಕಡ್ಡಾಯಗೊಳಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಮಳೆ ನೀರು ಕೋಯ್ಲು ಯೋಜನೆಯನ್ನು ಅಳವಡಿಸಿಕೊಳ್ಳಲು ಯಾರು ಪ್ರಯತ್ನ ಮಾಡುತ್ತಾರೆಯೋ ಅವರಿಗೆ ಮುಂದಿನ 5 ವರ್ಷಗಳವರೆಗೆ ಪಾವತಿ ಮಾಡಬೇಕಾದ ಒಟ್ಟಾರೆ ಆಸ್ತಿ ತೆರಿಗೆ ಮೇಲೆ ಶೇಕಡ 2 ರಷ್ಟು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ವಿಧಾನ ಪರಿಷತ್ತಿನ ಭರವಸೆ ಸಮಿತಿ ಸಭೆಯಲ್ಲಿ ಮಳೆ ನೀರು ಕೊಯ್ಲು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಸ್ವತ್ತಿನ ಮಾಲೀಕರುಗಳಿಗೆ ರಿಯಾಯಿತಿ ನೀಡಲು ಆಶ್ವಾಸನೆ ನೀಡಿರುತ್ತಾರೆ.
ಮೇಲಿನ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರವು ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 295ಕ್ಕೆ ಪೂರಕವಾಗಿ ಸೆಕ್ಷನ್ 295ಎ ರನ್ನು ಜಾರಿಗೆ ತರಲಾಗಿರುವ ತಿದ್ದುಪಡಿಯಂತೆ ಮುಂದಿನ 5 ವರ್ಷಗಳವರೆಗೆ ಪಾವತಿ ಮಾಡಬೇಕಾದ ಒಟ್ಟಾರೆ ಆಸ್ತಿ ತೆರಿಗೆ ಮೇಲೆ ಶೇಕಡ 2 ರಷ್ಟು ರಿಯಾಯಿತಿ ನೀಡುವಲ್ಲಿ ದಿನಾಂಕ ಃ 1-4-2012 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ದಾಖಲೆಗೆ ಟಿಪ್ಪಣಿ ಮಂಡಿಸಲಾಗಿದೆ. ನಿರ್ಣಯದ ನಂತರ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಂಡಿಸಿ ಅನುಮೋದನೆ ಕೋರಲಾಗುವುದು.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ : 29.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *08] ವಿಷಯದ ಸಂಖ್ಯೆ :-ತೆಆಸ್ಥಾಸ/112/2012-13*

ವಿಶೇಷ ಆಯುಕ್ತರ (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/80/12-13, ದಿನಾಂಕ: 14-06-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 6, ಮಲ್ಲೇಶ್ವರಂ, 1ನೇ ಮುಖ್ಯರಸ್ತೆಯ ಸ್ವತ್ತಿನ ಸಂಖ್ಯೆ 44ರ ಪಕ್ಕದಲ್ಲಿರುವ ಸ್ವತ್ತಿನ ವಿಸ್ತೀರ್ಣವು 30*13+27/2 ಅಡಿಗಳ ಸ್ವತ್ತನ್ನು ಶ್ರೀ.ಕೆ.ರಾಮರಾಜ್ ರವರು 1968 ರಲ್ಲಿ ಕ್ರಯಕ್ಕೆ ಪಡೆದಿದ್ದು, ಸದರಿಯವರು ನಿಧನ ಹೊಂದಿದ್ದು, ಅವರ ಅವಲಂಬಿತದಾರರು ಸದರಿ ಸ್ವತ್ತಿಗೆ ಕ್ರಯಪತ್ರ ನೀಡಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ದಿ: 26-10-2010ರಂದು ಸಭೆಯಲ್ಲಿ ಅರ್ಜಿದಾರರು ಕೋರಿರುವ ಜಾಗವನ್ನು ಮಾರುಕಟ್ಟೆ ದರವನ್ನು ವಸೂಲಿ ಮಾಡಿಕೊಂಡು ಕ್ರಯಪತ್ರ ನೀಡಲು ನಿರ್ಧರಿಸಿರುತ್ತದೆ. ಇದಕ್ಕೆ ಪೂರವಾಗಿ ದಿನಾಂಕ: 27-12-2011 ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
ಸರ್ಕಾರದ ಪತ್ರ ಸಂಖ್ಯೆ ನಅಇ 143 ಎಂಎನ್‌ಜಿ 2012 ದಿನಾಂಕ 23-05-2012ರ ಪತ್ರದಲ್ಲಿ ಶ್ರೀ. ನಾಗರಾಜ್ ಇವರಿಗೆ ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಈಗಿನ ಮಾರುಕಟ್ಟೆ ದರವನ್ನು ನಿಧಿಪಡಿಸಿ ಪ್ರಸ್ತುತ ಅಸ್ತಿತ್ವದಲ್ಲಿರುವ ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದು ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.
ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿವಿಸಿ-19/2010-11, ದಿ: 21-09-2011 ರಂತೆ ಸ್ಥಿರಾಸ್ತಿಗಳ ಮತ್ತು ಕಟ್ಟಡದ ಅಂದಾಜು ಮಾರುಕಟ್ಟೆ ದರದಂತೆ ಪ್ರಸ್ತುತ ಪ್ರದೇಶದಲ್ಲಿ ಚದರ ಅಡಿ ಒಂದಕ್ಕೆ ರೂ. 4000/- ಇದ್ದು, ಇದಕ್ಕೆ, ಶೇ 20% ರಷ್ಟು

(ವಾಣಿಜ್ಯ ಉದ್ದೇಶಕ್ಕೆ) ಹೆಚ್ಚಿಸಿದಾಗ ಒಟ್ಟು ಮೊತ್ತ ಚದರ ಅಡಿ 1ಕ್ಕೆ ರೂ. 4000+800=4800/– ಆಗುತ್ತದೆ. ಇದರಂತೆ ಸ್ವತ್ತಿನ ಮೌಲ್ಯ 30*13+27/2=600 ಚದರ ಅಡಿ ರೂ. 28,80000/– ಆಗುತ್ತದೆ.
ಈ ಮೇಲಿನ ಹಿನ್ನೆಯಲ್ಲಿ ಶ್ರೀ. ನಾಗರಾಜ್ ರವರಿಗೆ ಕ್ರಯಕ್ಕೆ ನೀಡುವ ಜಾಗದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ದಿನಾಂಕ: 14–06–2012ರ ಟಿಪ್ಪಣಿಯನ್ನು ಪರಿಶೀಲಿಸಿ, ಶ್ರೀ ನಾಗರಾಜ್ ರವರಿಂದ ಬರಬೇಕಾದ ಬಾಕಿ ಕಂದಾಯವನ್ನು ಪಾವತಿಸಿಕೊಂಡ ನಂತರ ಸದರಿಯವರಿಗೆ ಸ್ವತ್ತನ್ನು ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–09–2012ರ ನಿರ್ಣಯ.

**–ಮೂಂದೂಡಿದೆ–**

## *09] ವಿಷಯದ ಸಂಖ್ಯೆ :–ತೆಆಸ್ಥಾಸ/113/2012–13*

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 11.07.2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹ ಕಂದಾಯ ಅಧಿಕಾರಿ ಗಾಂಧಿನಗರ ಉಪವಿಭಾಗದ ವಾರ್ಡ್ 94, ಗಾಂಧಿನಗರ, 6ನೇ ಮುಖ್ಯರಸ್ತೆ, ಮೈಸೂರ್ ಬಜಾರ್ ಪಕ್ಕದಲ್ಲಿನ 4x4 ಅಡಿಗಳ ಜಾಗವನ್ನು ಶ್ರೀ. ಅಬ್ದುಲ್ ಬಷೀರ್ (ಅಂಗವಿಕಲರು) ರವರಿಗೆ ಪೆಟ್ಟಿಗೆ ಅಂಗಡಿ ನಡೆಸಲು ದಿನಾಂಕ: 26.04.2007 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿ ರೂ. 262/– ಮಾಸಿಕ ಬಾಡಿಗೆ ನಿಗಧಿಪಡಿಸಲಾಗಿದ್ದು, ಅದರಂತೆ ಗುತ್ತಿಗೆದಾರರು ಏಪ್ರಿಲ್–2012 ರವರೆಗೆ ಬಾಡಿಗೆ ಮೊತ್ತವನ್ನು ಪಾವತಿಸಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 25.04.2012ಕ್ಕೆ ಮುಗಿದಿರುವ ಹಿನ್ನೆಲೆಯಲ್ಲಿ ಮತ್ತೆ 5 ವರ್ಷಗಳ ಅವಧಿಗೆ ಗುತ್ತಿಗೆ ಕರಾರು ಪತ್ರ ನವೀಕರಣಕ್ಕಾಗಿ ಅರ್ಜಿ ಮುಖೇನ ಕೋರಿರುತ್ತಾರೆ.
ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರು ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಭಲೀಕರಣ ನಿರ್ದೇಶನಾಲಯ ಕಛೇರಿ, ಕರ್ನಾಟಕ ಸರ್ಕಾರ ರವರು ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು ಅರ್ಜಿದಾರರು ಅಂಗವಿಕಲರಾಗಿರುವುದಿರಿಂದ ಅವರ ಜೀವನೋಪಾಯಕ್ಕಾಗಿ ಅವರಿಗೆ ಹಾಲಿ ನೀಡಿರುವ ಗುತ್ತಿಗೆ ಜಾಗವನ್ನು ನವೀಕರಿಸಲು ಶೀಫಾರಸ್ಸು ಮಾಡಿರುತ್ತಾರೆ.
ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ: 17.04.2007ರಂತೆ ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ ರೂ. 5000/– ಗಳಾಗಿದ್ದು, ಇದಕ್ಕೆ ಶೇ: 40ರಷ್ಟು ಹೆಚ್ಚಿಸಿದಾಗ 5000+2000=7000/–ಗಳಾಗಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 4x4=16 ಚದರ ಅಡಿಗಳಾಗಿದ್ದು, ಅಡಿ ಒಂದಕ್ಕೆ 7000x16=1,12,000/– ರೂ. ಗಳಾಗುತ್ತದೆ. ಶೇ.10% ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಹಣವು 11,200/– ರೂ.ಗಳಾಗುತ್ತದೆ. ಅಂದರೆ ಮಾಸಿಕ ಗುತ್ತಿಗೆ ಹಣವು ರೂ. 933/– ಗಳಾಗುತ್ತದೆ, ಅರ್ಜಿದಾರರು ಅಂಗವಿಕಲರಾಗಿರುವುದರಿಂದ ಶೇ.50%ರಷ್ಟು ರಿಯಾಯತಿ ನೀಡಿದಲ್ಲಿ ಮಾಸಿಕ ಗುತ್ತಿಗೆ ಮೊತ್ತ 467/– ರೂ. ಗಳಾಗುತ್ತದೆ.
ಈ ಮೇಲ್ಕಂಡ ಎಲ್ಲಾ ವಿಷಯವನ್ನು ಅವಗಾಹನೆಗೆ ತರುತ್ತಾ, ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 11–07–2012ರ ಟಿಪ್ಪಣಿಯನ್ನು ಪರಿಶೀಲಿಸಿ, ಪಾದಚಾರಿಗಳಿಗೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗದಂತೆ ಷರತ್ತು ವಿಧಿಸಿ ಸದರಿ ಶ್ರಿ ಅಬ್ದುಲ್ ಬಷೀರ್ (ಅಂಗವಿಕಲರು) ರವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು 5 ವರ್ಷಗಳ ಅವಧಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–09–2012ರ ನಿರ್ಣಯ.

**–ಮೂಂದೂಡಿದೆ–**

## *10] ವಿಷಯದ ಸಂಖ್ಯೆ :–ತೆಆಸ್ಥಾಸ/114/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/44/12–13, ದಿನಾಂಕ: 20–07–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ ಜಿ. ಚಂದ್ರಶೇಖರ್ ರವರು ಸ್ವತ್ತಿನ ಸಂಖ್ಯೆ:8, 12ನೇ ಅಡ್ಡರಸ್ತೆ, ತ್ಯಾಗರಾಜನಗರ ಸ್ವತ್ತಿನಲ್ಲಿ ವಾಸಿಸುತ್ತಿದ್ದು, ಕ್ರಯಪತ್ರ ನೀಡಲು ಕೋರಿರುವ ವಿಷಯವಾಗಿರುತ್ತದೆ.
ಈ ಬಗ್ಗೆ ವಲಯಾಧಿಕಾರಿಗಳು ಸರ್ಕಾರಿ ಆದೇಶ ಸಂಖ್ಯೆ: ನಅಇ/20ಎಂಎನ್‌ಜಿ/99, ದಿನಾಂಕ:17–02–2004ರಂತೆ, ಶ್ರೀ ಜಿ. ಚಂದ್ರಶೇಖರ್‌ರವರು ಫಲಾನುಭವಿಯೆಂದು ಗುರ್ತಿಸಿ, 720 ಚ.ಅಡಿ ನಿವೇಶನಕ್ಕೆ ಚದರ ಅಡಿ 1ಕ್ಕೆ 175/– ರೂ.

ನಿಗಧಿಪಡಿಸಿ, ಒಟ್ಟು 1,26,000/- ರೂ. ಗಳನ್ನು 15 ದಿನಗಳೊಳಗಾಗಿ ಪಾವತಿಸಿ, ಕ್ರಯಪತ್ರ ನೊಂದಾಯಿಸಿಕೊಳ್ಳುವಂತೆ ದಿನಾಂಕ: 19-10-2004 ರಂದು ಹಿಂಬರಹ ನೀಡಿದ್ದು, ಆದರೆ, ಅರ್ಜಿದಾರರು ಹಣವಿಲ್ಲದಿರುವುದರಿಂದ ನಿಗಧಿತ ಕಾಲದಲ್ಲಿ ಪಾವತಿಸಲು ಕ್ರಯಪತ್ರ ನೀಡಲು ಕೋರಿರುತ್ತಾರೆ. ಆದರೆ, ಈ ಪ್ರದೇಶದಲ್ಲಿ ಶ್ರೀಮತಿ ಮಂಗಮ್ಮ ರವರಿಗೆ 1247 ಚ.ಅ. ವಿಸ್ತೀರ್ಣ ನಿವೇಶನವನ್ನು ಮಾರುಕಟ್ಟೆ ದರಕ್ಕೆ ಶೇ:20% ರಷ್ಟು ಹೆಚ್ಚಿಸಿ ಮೊತ್ತ ಪಾವತಿಸಿಕೊಂಡು ಕ್ರಯಪತ್ರ ನೊಂದಾಯಿಸಲಾಗಿರುತ್ತದೆ. ಆದುದರಿಂದ, ಶ್ರೀ ಜಿ.ಚಂದ್ರಶೇಖರ್ ರವರಿಗೆ ಈಗಿನ ಮಾರುಕಟ್ಟೆ ದರದ ಆಧಾರದ ಮೇಲೆ ಕ್ರಯಪತ್ರ ನೀಡಲು ಸ್ಥಾಯಿಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ತೀರ್ಮಾನಕ್ಕೆ ಮಂಡಿಸಲು ಪ್ರಸ್ತಾಪಿಸಿರುತ್ತಾರೆ.

ಆದುದರಿಂದ, ಈ ಪ್ರದೇಶದಲ್ಲಿ ಶ್ರೀಮತಿ. ಮಂಗಮ್ಮ ರವರಿಗೆ ನೀಡಿರುವಂತೆ ಈ ಅರ್ಜಿದಾರರಿಗೆ ಈಗಿನ ಮಾರುಕಟ್ಟೆ ದರಕ್ಕೆ ಶೇ 20% ರಷ್ಟು ಹೆಚ್ಚಿಸಿ ಮೊತ್ತ ನಿಧಿಪಡಿಸಿ, ಕ್ರಯಪತ್ರ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಸ್ಥಾಯಿಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿಗೆ ಚದರ ಅಡಿ ಒಂದಕ್ಕೆ ರೂ. 2,000/-ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 720 ಚ.ಅಡಿಗಳಾಗುತ್ತದೆ. ಇದರಂತೆ 2000*720=14,40,000/- ರೂ.ಗಳಾಗುತ್ತದೆ. ಸರ್ಕಾರಿ ಆದೇಶದಂತೆ, ಶೇ:20% ರಷ್ಟು ಹೆಚ್ಚಿಸಿದಾಗ 17,28,000/- ರೂ.ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಜಿ.ಚಂದ್ರಶೇಖರ್ ರವರಿಗೆ ಕ್ರಯಪತ್ರ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾಪಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20-07-2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11-09-2012ರ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11.09.2012ರ ನಿರ್ಣಯವನ್ನು ಒಪ್ಪಲಾಯಿತು.**

## ***<u>ಸ್ಥಳ ಪರಿಶೀಲನೆ ಕಡತ :-</u>***

### ***<u>01] ವಿಷಯದ ಸಂಖ್ಯೆ :-ತೆಆಸ್ಥಾಸ/61/2012-13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/92/10-11, ದಿನಾಂಕ : 10-01-2012ರಲ್ಲಿ ವಿವರಿಸಿರುವಂತೆ, ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರು, ಸ್ವತ್ತಿನ ಸಂಖ್ಯೆ:10 (ಹಳೆದು-315), 2ನೇ ಅಡ್ಡರಸ್ತೆ ಎನ್.ಆರ್. ಕಾಲೋನಿ, ಈ ಸ್ವತ್ತನ್ನು ಪಾಲಿಕೆಯಿಂದ 1949 ರಲ್ಲಿ ಹರಾಜು ಮುಖಾಂತರ ಪಡೆದಿದ್ದು, ಕ್ರಯಪತ್ರ ಪಡೆಯದೆ ಇರುವುದರಿಂದ, ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತನ್ನು ಶ್ರೀಮತಿ.ಪಾರ್ವತಮ್ಮ 1949ರಲ್ಲಿ 40x60 ಅಡಿಗಳ ಸ್ವತ್ತನ್ನು 2600/-ರೂ.ಗಳಿಗೆ ಹರಾಜಿನ ಮೂಲಕ ಪಡೆದು ಆಗ್ರಿಮೆಂಟ್ ಪತ್ರವನ್ನು ಮಾಡಿಕೊಂಡಿರುತ್ತಾರೆ. ಹಣ ಪಾವತಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ಕ್ರಯಪತ್ರ ನೊಂದಾಯಿಸಿಕೊಂಡಿರುವುದಿಲ್ಲ. ಆದರೆ, ಆಗ್ರಿಮೆಂಟ್ ಪತ್ರದ ಆಧಾರ ಖಾತಾ ನೊಂದಾಯಿಸಿ ಕೊಂಡಿರುತ್ತಾರೆ. ಶ್ರೀಮತಿ.ಪಾರ್ವತಮ್ಮರವರು ಹಾಗೂ ಇವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿದ್ದು, ಇತರೇ ವಾರಸುದಾರರು ಶ್ರೀಮತಿ.ಪಾರ್ವತಮ್ಮನವರ ಮಗಳಾದ ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರಿಗೆ ನೊಂದಾಯಿತ ಜಿ.ಪಿ.ಎ. ಪತ್ರದ ಆಧಾರ ಅಧಿಕಾರ ನೀಡಿರುವುದರಿಂದ ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತಿನ ಒಟ್ಟು 40x60 ಅಡಿಗಳ ಹಿಂಭಾಗದ ಅಳತೆಯಲ್ಲಿ 16x40 ಅಡಿಗಳನ್ನು ಶ್ರೀ ವಿ.ಗುರುರಾಜ ರವರಿಗೆ ಕ್ರಯಪತ್ರದ ಮೂಲಕ ಕ್ರಯಕ್ಕೆ ನೀಡಿದ್ದು, 3ಥ44 ಅಡಿಗಳು ಓಡಾಡಲು ದಾರಿ ಬಿಟ್ಟಿದ್ದು, ಉಳಿಕೆ 44x37 ಅಡಿಗಳಿರುತ್ತದೆ. ಶ್ರೀ.ವಿ.ಗುರುರಾಜರವರಿಗೆ 16x40 ಅಡಿಗಳಿಗೆ ಖಾತಾ ನೊಂದಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿ ಚದರ ಅಡಿ ಒಂದಕ್ಕೆ ರೂ.3000/-ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 1628 ಚ.ಅಡಿ ಗಳಾಗುತ್ತದೆ. ಇದರಂತೆ 3000x1628 = 48,84,000/- ರೂ.ಗಳಾಗುತ್ತದೆ.

ಸದರಿ ವಿಷಯದಲ್ಲಿ ಮೂಲ ಕಡತ ಲಭ್ಯವಿಲ್ಲದೇ ಇರುವುದರಿಂದ, ಶ್ರೀಮತಿ.ಪಾರ್ವತಮ್ಮ ಮತ್ತು ಅವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿರುವುದರಿಂದ ಮತ್ತು ಇತರೆ ವಾರಸುದಾರರಿಂದ ನೊಂದಾಯಿತ ಜಿ.ಪಿ.ಎ. ಪತ್ರದ ಮೂಲಕ ಅಧಿಕಾರ ಪಡೆದಿರುವ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರಿಗೆ ಸಂಪೂರ್ಣ ವಿಸ್ತೀರ್ಣಕ್ಕೆ ನೊಂದಾವಣೆ ಇಲಾಖೆಯ ದರ ಇತ್ಯಾದಿಗಳನ್ನು ಸರ್ಕಾರಕ್ಕೆ ಸಂದಾಯ ಮಾಡಿಸಿಕೊಂಡು ನೊಂದಾಯಿಸಲು ತದನಂತರ, ಶ್ರೀ ಗುರುರಾಜ್ ಇವರಿಗೆ

ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಎಲ್ಲಾ ದರಗಳನ್ನು ಸಂದಾಯ ಮಾಡಿ ನೊಂದಾಯಿಸಿ ಕೊಡುವ ಷರತ್ತು ವಿಧಿಸಿ ಕ್ರಯಪತ್ರ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 10.01.2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

## –ಮುಂದೂಡಿದೆ–

## ***ಹೆಚ್ಚುವರಿ ವಿಷಯ :–***

## ***01] ವಿಷಯದ ಸಂಖ್ಯೆ :–ತೆಆಸ್ಥಾಸ/115/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಕಂ)ಪಿಆರ್/208/12–13, ದಿನಾಂಕ : 28.09.2012ರಲ್ಲಿ ವಿವರಿಸಿರುವಂತೆ ಕರ್ನಾಟಕ ಪೌರ ನಿಗಮಗಳ ಕಾಯ್ದೆ ಕಲಂ 108 (ಎ) (16) ರ ಅನುಸಾರ ಪ್ರದೇಶವಾರು ಯೂನಿಟ್ ದರದ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಿನಾಂಕ:01–04–2008 ರಿಂದ ಜಾರಿಗೆ ತರಲಾಗಿರುವುದು ಸರಿಯಷ್ಟೆ. ಕೆ.ಎಂ.ಸಿ. ಕಾಯ್ದೆ 108 (2) ರ ಅನುಸಾರ ಆಯುಕ್ತರು ವಲಯ ವರ್ಗೀಕರಣ, ಘಟಕ ಪ್ರದೇಶವಾರು ಯೂನಿಟ್ ದರ ಮತ್ತು ಸ್ವತ್ತಿನ ವರ್ಗ ಮುಂತಾದವುಗಳ ಬಗ್ಗೆ ಬರುವ ಯಾವುದೇ ಸಂಶಯವನ್ನು ಪರಿಹರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು, ಈ ಸಂಬಂಧದಲ್ಲಿ ಆಯುಕ್ತರ ತೀರ್ಮಾನ ಅಂತಿಮವಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ. ಆದುದರಿಂದ ಸದರಿ ಪದ್ಧತಿ ಅಡಿಯಲ್ಲಿ 5 ವಸತಿ ವರ್ಗಗಳು ಹಾಗೂ 13 ವಸತಿಯೇತರ ಉಪಯೋಗದ ವರ್ಗಗಳು ಎಂಬುದಾಗಿ ಗುರುತಿಸಲಾಗಿದೆ. ವರ್ಗ 7 ಮತ್ತು 8 ರಲ್ಲಿ ಯಾವುದೇ ವಲಯದಲ್ಲಿರುವ ಎಸ್ಕಲೇಟರ್‌ಗಳನ್ನು ಅಳವಡಿಸಿರುವ ಹಾಗೂ ಸಮಗ್ರ ಹವಾನಿಯಂತ್ರಿತ ಸೌಲಭ್ಯಗಳನ್ನೊಳಗೊಂಡ ಸ್ವತ್ತುಗಳಿಗೆ ರೂ.20 ರಂತೆ ದರವನ್ನು ನಿಗಧಿಪಡಿಸಲಾಗಿದೆ.

ಪೂಜ್ಯ ಮಹಾಪೌರರ ದಿನಾಂಕ:20–07–2012ರ ಟಿಪ್ಪಣಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಸತಿಯೇತರ / ವಾಣಿಜ್ಯ ಕಟ್ಟಡಗಳಿದ್ದು ಅವುಗಳಲ್ಲಿ ಹವಾನಿಯಂತ್ರಿತ ಮತ್ತು ಎಸ್ಕಲೇಟರ್ ಹೊಂದಿರುವ ಕಟ್ಟಡಗಳಿಗೆ ವಿಧಿಸಿರುವ ಘಟಕ ಪ್ರದೇಶ ಮೌಲ್ಯ ತಾರತಮ್ಯದಿಂದ ಕೂಡಿದ್ದು, ಈ ದರವನ್ನು ಸೂಕ್ತವಾಗಿ ಪರಿಷ್ಕರಿಸಿದಲ್ಲಿ ಪಾಲಿಕೆಗೆ ಸಾಕಷ್ಟು ಆಸ್ತಿ ತೆರಿಗೆ ಬರುವುದಲ್ಲದೇ ಈ ನಿಟ್ಟಿನಲ್ಲಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳನ್ನು ಇತ್ಯರ್ಥಪಡಿಸಬಹುದಾಗಿದೆ ಎಂದು ತಿಳಿಸಿ ಈ ಬಗ್ಗೆ ಪಾಲಿಕೆ ಸಭೆಯ ಮುಂದೆ ಒಂದು ಪ್ರಸ್ತಾವನೆಯನ್ನು ಮಂಡಿಸಲು ಸೂಚಿಸಿರುತ್ತಾರೆ.

2008ನೇ ಸಾಲಿನಲ್ಲಿ ಪಾಲಿಕೆಯು ನಿಗಧಿಪಡಿಸಲಾಗಿರುವ ದರವು ಸಾರ್ವಜನಿಕರಿಗೆ ನ್ಯಾಯ ಹಾಗೂ ಸಮಾನತೆ ದೃಷ್ಟಿಯಿಂದ ತುಂಬಾ ಅನ್ಯಾಯವಾಗಿದೆಯೆಂದು, ತೆರಿಗೆದಾರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿರುತ್ತಾರೆ. ನ್ಯಾಯಾಲಯವು ಹಲವು ಪ್ರಕರಣಗಳಲ್ಲಿ ನಿಗಧಿಪಡಿಸಲಾಗಿರುವ ದರದಲ್ಲಿ ಶೇಕಡ 50 ರಷ್ಟು ಮೊತ್ತವನ್ನು ಪಾವತಿಸಲು ಮಧ್ಯಂತರ ಆದೇಶ ಹೊರಡಿಸಿರುತ್ತದೆ. ಈ ಸಂಬಂಧ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿರುವುದರಿಂದ ತೆರಿಗೆದಾರರಿಂದ ಪೂರ್ಣ ಪ್ರಮಾಣದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ದರಗಳನ್ನು ಪುನರ್ ಪರಿಷ್ಕರಿಸುವ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ದಿನಾಂಕ:24–09–2012 ರಂದು ಮನವಿ ಪತ್ರ ಸಲ್ಲಿಸಿ ನ್ಯಾಯಾಲಯದ ಗಮನಕ್ಕೆ ಈ ವಿಷಯವನ್ನು ತರಲು ಕೋರಲಾಗಿದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಇರುವ ದರಗಳಂತೆ ಹೆಚ್ಚಿನ ಸಮಗ್ರ ಹವಾನಿಯಂತ್ರಿತ ಕಟ್ಟಡಗಳಿಗೆ ಹೊಸ ವಲಯಗಳಲ್ಲಿ ಬಾಡಿಗೆ ದರ ಚದರಡಿ ಒಂದಕ್ಕೆ ರೂ.10 ರಿಂದ ರೂ.25 ರವರೆಗೆ ಇರುತ್ತದೆ ಹಾಗೂ ಅಭಿವೃದ್ಧಿ ಹೊಂದಿರುವ ಹಳೆಯ 100 ವಾರ್ಡ್‌ಗಳಲ್ಲಿ (ಹಿಂದಿನ ಬಿ.ಎಂ.ಪಿ) ಚದರಡಿ ಒಂದಕ್ಕೆ ರೂ.20 ರಿಂದ ರೂ.75 ರವರೆಗೆ ಇರುತ್ತದೆ. ಆದರೆ 2008ನೇ ಸಾಲಿನಲ್ಲಿ ನಿಗಧಿಪಡಿಸಲಾಗಿರುವ ದರಗಳಿಗೆ ಹೋಲಿಸಿದಲ್ಲಿ ಪ್ರಸ್ತುತ ಬಾಡಿಗೆ ದರಗಳಿಗಿಂತ ಶೇಕಡ 30 ರಷ್ಟು ಕಡಿಮೆ ಇರುತ್ತದೆ ಹಾಗೂ ಸಮಗ್ರ ಹವಾನಿಯಂತ್ರಿತ / ಎಸ್ಕಲೇಟರ್‌ಗಳನ್ನು ಇಲ್ಲದೆ ಇರುವ ವಸತಿಯೇತರ ಉಪಯೋಗದ ಕಟ್ಟಡಗಳಿಗೆ ಈಗಾಗಲೇ 2008ನೇ ಸಾಲಿನಲ್ಲಿ 6 ವಲಯಗಳಿಗೆ ಕನಿಷ್ಠ ಚದರಡಿ ಒಂದಕ್ಕೆ ರೂ.3.00 ರಿಂದ ಗರಿಷ್ಠ ರೂ.20 ರವರೆಗೆ ಪ್ರದೇಶವಾರು ಯೂನಿಟ್ ದರಗಳನ್ನು ನಿಗಧಿಪಡಿಸಲಾಗಿದ್ದು (A-Rs.20-00, B-Rs.14-00, C-Rs.10-00, D-Rs.8-00, E-Rs.6-00, F-Rs.3-00) ಈ ದರಗಳ ಅನ್ವಯ ಬಾಡಿಗೆಗೆ ಇರುವಂತಹ ಕಟ್ಟಡಗಳಿಗೆ ತೆರಿಗೆ

ಲೆಕ್ಕಾಚಾರ ಮಾಡತಕ್ಕದ್ದು ಹಾಗೂ ಸ್ವಂತ ಉಪಯೋಗದ ಕಟ್ಟಡಕ್ಕೆ ಶೇಕಡ 50 ರಷ್ಟನ್ನು ರಿಯಾಯಿತಿ ನೀಡಲಾಗಿದೆ. ಅದರಂತೆ ಸಮಂಜಸವಾದ ದರಗಳನ್ನು ಗಮನದಲ್ಲಿಟ್ಟುಕೊಂಡು ವಲಯವಾರು ಪ್ರದೇಶವಾರು ಯೂನಿಟ್ ದರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಬಹುದಾಗಿದೆ.

| ಕಲಂ1 | ಕಲಂ 2 | ಕಲಂ 3 | | | | | | |
|---|---|---|---|---|---|---|---|---|
| ವರ್ಗ | ಆಸ್ತಿ ವಿವರಣೆ | 1 ತಿಂಗಳಿಗೆ ವಲಯವಾರು ಚ.ಅಡಿ 1ಕ್ಕೆ ಯೂನಿಟ್ ದರದ ವಿವರಗಳು | | | | | | |
| VII | ಯಾವುದೇ ವಲಯದಲ್ಲಿರುವ ಎಸ್ಕಲೇಟರ್‌ಗಳನ್ನು ಅಳವಡಿಸಿರುವ (ಎಸ್ಕಲೇಟ್ ಉಪಯೋಗವಿರಲಿ ಅಥವಾ ಇಲ್ಲದಿರಲಿ) ಮತ್ತು ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳು ಇಲ್ಲದಿರುವ ಕಟ್ಟಡಗಳು, ವರ್ಗ VIII ರಿಂದ XIV ರವರೆಗಿನ ಆಸ್ತಿಗಳನ್ನು ಹೊರತುಪಡಿಸಿ | | A ವಲಯ | B ವಲಯ | C ವಲಯ | D ವಲಯ | E ವಲಯ | F ವಲಯ |
| | | | 20.00 (ಹಳೆಯ ದರ) | | | | | |
| | | ಪ್ರಸ್ತಾಪಿತ ಪರಿಷ್ಕೃತ ದರಗಳು | ರೂ. 20.00 | ರೂ. 16.00 | ರೂ. 12.00 | ರೂ. 10.00 | ರೂ. 8.00 | ರೂ. 6.00 |
| VIII | ಯಾವುದೇ ಪ್ರದೇಶದಲ್ಲಿರುವ (ವಲಯ) ಎಲ್ಲಾ ವಸತಿಯೇತರ ಉಪಯೋಗದ ಸ್ವತ್ತುಗಳು ಸಮಗ್ರ ಹವಾನಿಯಂತ್ರಿತ ಸೌಲಭ್ಯಗಳನ್ನೊಳಗೊಂಡಿದ್ದು, ಅವುಗಳ ಉಪಯೋಗವಿರಲಿ ಅಥವಾ ಇಲ್ಲದಿರಲಿ ಮತ್ತು ಒಬ್ಬ ಅನುಭವದಾರ ಅಥವಾ ಹೆಚ್ಚಿನ ಅನುಭವದಾರರು ಉಪಯೋಗಿಸುತ್ತಿರುವ ಸ್ವತ್ತುಗಳ ನಿರ್ಮಿತ ಪ್ರದೇಶಗಳ ಅನುಸಾರ | 5,000 ಅಡಿಗಳಿಗಿಂತ ಮೇಲ್ಪಟ್ಟು | ರೂ.20.00 (ಹಳೆಯ ದರ) | | | | | |
| | | 5,000 ಅಡಿಗಳಿಗಿಂತ ಕಡಿಮೆಯಿರುವ ಸ್ವತ್ತುಗಳು | ರೂ.18.00 (ಹಳೆಯ ದರ) | | | | | |
| | | ಪ್ರಸ್ತಾಪಿತ ಪರಿಷ್ಕೃತ ದರಗಳು | ರೂ. 20.00 | ರೂ. 16.00 | ರೂ. 12.00 | ರೂ. 10.00 | ರೂ. 8.00 | ರೂ. 6.00 |

ಪ್ರದೇಶವಾರು ಯೂನಿಟ್ ದರಗಳನ್ನು ನಿಗಧಿಪಡಿಸುವ ಸಂಬಂಧ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 (ಕರ್ನಾಟಕ ಕಾಯ್ದೆ 14, 1977)ರ ಪ್ರಕರಣ 108 ಎ ಉಪ ಪ್ರಕರಣ 2ರ ಅಡಿಯಲ್ಲಿನ ವಿವರಗಳ ಮೇರೆಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ವಲಯ ಯೂನಿಟ್ ದರಗಳನ್ನು ನಿರ್ಧರಿಸುವಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸದಂತೆ ಸಾರ್ವಜನಿಕರಿಂದ ಸಲಹೆಗಳು ಮತ್ತು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಪ್ರಕಟಣೆಯನ್ನು ಹೊರಡಿಸಬೇಕಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ. ಈ ಪ್ರಕಟಣೆಯನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 21 ದಿಗಳ ತರುವಾಯ ಈ ಕರಡು ಅಧಿಸೂಚನೆಗಳು ಜಾರಿಗೆ ಬರುತ್ತವೆ.
ಸದರಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ, ನಿಗಧಿತ ಅವಧಿಯೊಳಗೆ ಸಲ್ಲಿಸುವ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದಲ್ಲಿ ಅದನ್ನು ಪರಿಶೀಲಿಸಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಅಂತಿಮ ತೀರ್ಮಾನಕೈಗೊಳ್ಳಬೇಕಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ. ಈ ದರವು ದಿನಾಂಕ:01–04–2008 ರಿಂದಲೇ ಅನ್ವಯವಾಗುವಂತೆ ಜಾರಿಗೊಳಿಸಬಹುದಾಗಿದೆ.
ಮೇಲ್ಕಂಡಂತೆ ಪರಿಷ್ಕೃತ ದರಗಳನ್ನು ನಿಗಧಿಪಡಿಸಿ ಕೆ.ಎಂ.ಸಿ. ಕಾಯ್ದೆ 108 ಎ (2) ಮೇರೆಗೆ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ, ನಗರ ಪಾಲಿಕೆ ಸಭೆಯ ನಿರ್ಣಯದ ನಂತರ ಕೆ.ಎಂ.ಸಿ. ಕಾಯ್ದೆ ಕಲಂ 108ಎ ಅಡಿಯಲ್ಲಿ ಇರುವ ನಿಯಮಗಳಂತೆ ಪ್ರದೇಶವಾರು ಯೂನಿಟ್ ದರಗಳನ್ನು ಜಾರಿಗೊಳಿಸುವಲ್ಲಿ ಕ್ರಮ ಜರುಗಿಸುವ ಬಗ್ಗೆ ಅನುಮೋದನೆಯನ್ನು ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಮಾನ್ಯ ಆಯುಕ್ತರ ದಿನಾಂಕ : 28.09.2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**